ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಡಿಸೆಂಬರ್ 28, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 225 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಅವೈಜ್ಞಾನಿಕ ಕೆಳ ಸೇತುವೆಗಳನ್ನು ಸರಿಪಡಿಸಿ



### ಹೆದ್ದಾರಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್ಸೆಸ್ಸೆಂ ನಿರ್ದೇಶನ

ದಾವಣಗೆರೆ, ಡಿ. 27 – ರಾಷ್ಟ್ರೀಯ ಹೆದ್ದಾರಿಗೆ ನಿರ್ಮಿಸಲಾಗಿರುವ ಅವೈಜ್ಞಾನಿಕ ಕೆಳ ಸೇತುವೆಗಳನ್ನು ಸರಿಪಡಿಸಬೇಕು ಹಾಗೂ ಸರ್ವೀಸ್ ರಸ್ತೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಸೂಚನೆ ನೀಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆ ತಮ್ಮ ಗೃಹ ಕಚೇರಿಯಲ್ಲಿ ಸಭೆ ನಡೆಸಿದ ಅವರು, ಶಾಮನೂರು ಬಳಿ ಇರುವ ಕೆಳ ಸೇತುವೆ ಮಾದರಿಯಲ್ಲೇ ಉಳಿದ ಸೇತುವೆಗಳನ್ನೂ ನಿರ್ಮಿಸಬೇಕು ಎಂದು ತಾಕೀತು ಮಾಡಿದರು.

ಹದಡಿ ಮಾರ್ಗದಲ್ಲಿರುವ ರಸ್ತೆಯಲ್ಲಿ ಹೆಚ್ಚು ಅಪಘಾತಗಳಾಗುತ್ತಿವೆ. ಈ ಕೆಳ ಸೇತುವೆಯನ್ನು ಸರಿ ಮಾಡುವ ಜೊತೆಗೆ, ಅಲ್ಲಿ ಸರ್ಕಲ್ ನಿರ್ಮಿಸಬೇಕು. ಅಲ್ಲಿನ ನೀರಿನ ಕಾಲುವೆಯನ್ನು ಗಮನದಲ್ಲಿಟ್ಟುಕೊಂಡು, ನೀರಿನ ಹರಿವು ಹಾಗೂ ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ಕೆಳ ಸೇತುವೆ ನಿರ್ಮಾಣವಾಗಬೇಕಿದೆ ಎಂದು ಸಚಿವರು ಹೇಳಿದರು.

ಬನಶಂಕರಿ ಬಡಾವಣೆ, ಎಸ್.ಎಸ್. ಆಸ್ಪತ್ರೆ ಎದುರು, ಕುಂದುವಾಡ ಹಾಗೂ ಬಾತಿ ಬಳಿಯ ಕೆಳ ಸೇತುವೆಗಳನ್ನು (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 249 ಅಪ್ರಾಪ್ತ ಹೆರಿಗೆ ಪ್ರಕರಣ

### ಆಧಾರ್ ಮಾಹಿತಿಯಿಂದ ಬಯಲಾಯಿತು ಅಪ್ರಾಪ್ತ ವಿವಾಹ ವ್ಯಾಪಕವಾಗಿರುವ ಸುಳಿವು

ದಾವಣಗೆರೆ, ಡಿ. 27 - ಅಪ್ರಾಪ್ತ ವಯಸ್ಸಿನಲ್ಲೇ ಗರ್ಭಿಣಿಯರಾಗಿ ಹೆರಿಗೆಯಾಗುವ 249 ಪ್ರಕರಣಗಳು ದಾವಣಗೆರೆ ಜಿಲ್ಲೆಯಲ್ಲಿ ಕಂಡು ಬಂದಿದ್ದು, ಇದು ಬಾಲ್ಯವಿವಾಹ ಸಮಸ್ಯೆ ಹೆಚ್ಚಾಗಿರುವುದನ್ನು ಬೆಳಕಿಗೆ ತಂದಿದೆ.

ಜಿಲ್ಲೆಯಲ್ಲಿ ಈ ವರ್ಷ ಬಾಲ್ಯ ವಿವಾಹದ 41 ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಪೈಕಿ 38 ಪ್ರಕರಣಗಳಲ್ಲಿ ಮದುವೆ ಆಗುವುದನ್ನು ತಡೆಯಲಾಗಿದೆ. ಮೂರು ಪ್ರಕರಣಗಳಲ್ಲಿ ಮದುವೆಯಾಗಿದ್ದು, ಈ ಬಗ್ಗೆ ಎಫ್.ಐ.ಆರ್. ದಾಖಲಿಸಲಾಗಿದೆ.

ಆದರೆ, ಇದಕ್ಕಿಂತ ಹಲವು ಪಟ್ಟು ಹೆಚ್ಚು ಮದುವೆಗಳು ಜಿಲ್ಲೆಯಲ್ಲಿ ನಡೆಯುತ್ತಿವೆ ಎಂಬುದನ್ನು ಅಪ್ರಾಪ್ತ ವಯಸ್ಸಿನಲ್ಲೇ ಹೆರಿಗೆಯಾದ ಪ್ರಕರಣಗಳು ಹೇಳುತ್ತಿವೆ.

ಜಿಲ್ಲೆಯಲ್ಲಿ ಅಪ್ರಾಪ್ತ ವಯಸ್ಸಿನಲ್ಲೇ 249 ಹೆಣ್ಣು ಮಕ್ಕಳಿಗೆ ಹೆರಿಗೆಯಾಗಿರುವುದು, ಆಸ್ಪತ್ರೆಯಲ್ಲಿ ನೀಡಲಾದ ಆಧಾರ್ ದಾಖಲೆಗಳಿಂದ ಪತ್ತೆಯಾಗಿದೆ. ಆದರೆ, ಈ ಯಾವುದೇ ಅಪ್ರಾಪ್ತ ಹೆರಿಗೆಗಳ ಬಗ್ಗೆ ವೈದ್ಯರು ಸಂಬಂಧಿಸಿದವರಿಗೆ ಮಾಹಿತಿ ನೀಡಿಲ್ಲ. ಕೇವಲ ಜಿಲ್ಲೆಯಷ್ಟೇ ಅಲ್ಲದೇ, ರಾಜ್ಯಾದ್ಯಂತ ಅಪ್ರಾಪ್ತೆಯರ ಹೆರಿಗೆ ಪ್ರಕರಣಗಳು ನಡೆದಿವೆ. ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾದವರ ವಿವರಗಳನ್ನು ರಾಜ್ಯ ಮಟ್ಟದಲ್ಲಿ ಪರಿಶೀಲಿಸಿದಾಗ, ಬಾಲ್ಯ ವಿವಾಹ ಹೆಚ್ಚು ವ್ಯಾಪಕವಾಗಿರುವುದು ಕಂಡು ಬಂದಿದೆ.



### ವೈದ್ಯರು ಅಪ್ರಾಪ್ತರ ಹೆರಿಗೆ ಬಗ್ಗೆ ಮಾಹಿತಿ ನೀಡದಿದ್ದರೆ ಕ್ರಮ ಎಂದು ಡಿಸಿ ಎಚ್ಚರಿಕೆ

ಅಪ್ರಾಪ್ತೆಯರು ಹೆರಿಗೆಗಾಗಿ ದಾಖಲಾಗಿದ್ದಾರೆ ಎಂದ ಮೇಲೆ ಮದುವೆಯಾಗದೇ ಇರುವ ಸಾಧ್ಯತೆ ಇದ್ದೇ ಇರುತ್ತದೆ. ಹೀಗಾಗಿ ಇಂತಹ ಪ್ರಕರಣಗಳ ಬಗ್ಗೆ ಹೆಚ್ಚು ಗಮನ ಹರಿಸಲು ರಾಜ್ಯ ಸರ್ಕಾರ ಸೂಚನೆ ನೀಡಿದೆ. (4ನೇ ಪುಟಕ್ಕೆ)

ADMISSION cum SCHOLARSHIP

1st PUC - 2024 ADMISSION
Scan QR Code for SET (Self Evaluation Test)
Scan for SET

CBSE, ICSE Offline Test on 07-01-2024 Time : 10 am to 12 noon
STATE Offline Test on 21-01-2024 Time : 10 am to 12 noon

NEET-2022 NEET MARKS 705/720 STATE 1st
NEET-2020 NEET MARKS 703/720 All India Rank 3rd
NEET-2023 NEET MARKS 680/720 DIST. 1st
PU-2023 PU MARKS 592/600

10 IIT STUDENTS 18 NIT STUDENTS 8 IIIT STUDENTS 9 AIIMS STUDENTS
300+ Free Medical seats in NEET - 2023
Scan For Brochure

SIR M V GROUP OF INSTITUTIONS
SIR MV PU COLLEGE SIR MV COMPOSITE PU COLLEGE, DAVANGERE. Ph: 08192-261200 9243312223, 87221 41400
SRI VIDYA BHARATHI PRE-UNIVERSITY (IND) COLLEGE, SHIMOGA Ph: 9148684483 9035141142, 8088350265
SATYAM PU COLLEGE, BALLARI Ph: 8197764018 9945377965

Sri Suparshwanath Educational Trust ®
JGi JAIN PUBLIC SCHOOL, DAVANGERE.
Affiliated to CBSE , New Delhi No. 830459



ಡಾ|| ಗುರುರಾಜ್ ಕರ್ಜಗಿ
ಶಿಕ್ಷಣ ತಜ್ಞರು,
ಅಧ್ಯಕ್ಷರು , ಸೃಜನಶೀಲ ಅಧ್ಯಾಪನ ಕೇಂದ್ರ (ACT), ಬೆಂಗಳೂರು.
ಇವರು ದಿನಾಂಕ : 28/12/2023 ರಂದು ಸಂಜೆ 5 ಗಂಟೆಗೆ ನಮ್ಮ ಶಾಲೆಯಲ್ಲಿ ನಡೆಯಲಿರುವ
JPS SPECTACULAR
An Evening with the little stars!
ಶಾಲಾ ವಾರ್ಷಿಕೋತ್ಸವ
ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ.
ಇವರ ಈ ಸ್ಫೂರ್ತಿದಾಯಕ ಕಾರ್ಯಕ್ರಮವು ಯುಟ್ಯೂಬ್‌ನಲ್ಲಿ ನೇರ ಪ್ರಸಾರವಾಗಲಿದ್ದು, ಆಸಕ್ತರು ಈ ಮೇಲಿರುವ QR code ನ್ನು ಸ್ಕ್ಯಾನ್ ಮಾಡುವ ಮೂಲಕ ನೇರವಾಗಿ ವೀಕ್ಷಿಸಬಹುದು.

-: Address :-
#323 , Near Veereshwara Punyashrama, Bada Cross , Davangere - 577003.
9844443223 , 9538688975 , 7378392875
www.jpsdvg2008@gmail.com www.jpsdvgrs.in

ಭರಮಸಾಗರ ಏತ ನೀರಾವರಿಯ ಕೆರೆಗಳ ವೀಕ್ಷಣೆ
ಶ್ರೀಗಳಿಗೆ ಹಾರ್ದಿಕ ಸುಸ್ವಾಗತ





ಭರಮಸಾಗರದ ದೊಡ್ಡ ಕೆರೆಗೆ ಹರಿಸಲ್ಪಟ್ಟ ನೀರಿನ ಹಾಗೂ ಕೆರೆಯ ವೀಕ್ಷಣೆಗೆ ದಿನಾಂಕ : 28.12.2023 ರಂದು ಗುರುವಾರ ಬೆಳಗ್ಗೆ 11.00 ಗಂಟೆಗೆ ಭೇಟಿ ನೀಡುತ್ತಿರುವ
ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ
ಭಕ್ತಿಪೂರ್ವಕ ಸ್ವಾಗತ...

ಸ್ವಾಗತ ಕೋರುವವರು :


ಶ್ರೀ ಜಿ.ಬಿ. ತೀರ್ಥಪ್ಪ
ಗ್ರಾಮದ ಹಿರಿಯ ಮುಖಂಡರು, ಚಿಕ್ಕಬೆನ್ನೂರು.


ಹೆಚ್.ಟಿ. ಗಿರೀಶ್
ಪ್ರಗತಿ ಪರ ರೈತರು ಹಾಗೂ ಪೆಟ್ರೋಲ್ ಬಂಕ್ ಮಾಲೀಕರು ಹೆಗ್ಗೆರೆ.


ಹೆಚ್.ಡಿ. ಚಂದನ್
ಬಿಪಿಸಿಎಲ್ ಡೀಲರ್, ಸಿವಿಲ್ ಇಂಜಿನಿಯರ್, ಭರಮಸಾಗರ.


ಎ.ಎಚ್. ನಾರಪ್ಪ
ಪ್ರಗತಿಪರ ರೈತರು ಹೆಗ್ಗೆರೆ.

ಭರಮಸಾಗರ ಹಾಗೂ ಅಕ್ಕಪಕ್ಕ ಗ್ರಾಮದ ಗ್ರಾಮಸ್ಥರು

# ತೃಪ್ತಿ, ಮಾನವೀಯ ಮೌಲ್ಯಗಳಿಂದ ಸಮಾಜದ ಬದಲಾವಣೆ ಸಾಧ್ಯ

**ಜಗಳೂರಿನ ಕಾರ್ಯಕ್ರಮದಲ್ಲಿ ನ್ಯಾ. ಎನ್. ಸಂತೋಷ್ ಹೆಗ್ಡೆ ಅಭಿಮತ**

ಜಗಳೂರು, ಡಿ.27- ತೃಪ್ತಿ ಮತ್ತು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡರೆ ಸಮಾಜದ ಬದಲಾವಣೆ ಸಾಧ್ಯ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹಾಗೂ ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಜೆ.ಎಂ.ಇಮಾಂ ಟ್ರಸ್ಟ್ ವತಿಯಿಂದ ಜೆ.ಎಂ.ಇಮಾಂ ಸ್ಮಾರಕ ಶಾಲೆ ಆವರಣದಲ್ಲಿ ಇಂದು ಏರ್ಪಾಡಾಗಿದ್ದ 'ಮುಷೀರ್-ಉಲ್-ಮುಲ್ಕ್' 'ಇಮಾಂ ರಾಜ್ಯ ಪ್ರಶಸ್ತಿ' ಪ್ರದಾನ ಸಮಾರಂಭ ಹಾಗೂ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ನಾನು ಕರ್ನಾಟಕ ಲೋಕಾಯುಕ್ತನಾಗಿ ಆಗಮಿಸಿದ ನಂತರ ಸಮಾಜದಲ್ಲಿ ನಡೆಯುವ ಸಾಕಷ್ಟು ಅನ್ಯಾಯಗಳನ್ನು ಕಂಡು ಕಣ್ಣೀರಿಟ್ಟಿರುವೆ. ಇದು ವ್ಯಕ್ತಿಯ ತಪ್ಪಲ್ಲ, ಸಮಾಜದ ತಪ್ಪಾಗಿದೆ. ಇಂದಿನ ಸಮಾಜದಲ್ಲಿ ಪ್ರಾಮಾಣಿಕತೆಗೆ ಬೆಲೆಯಿಲ್ಲ. ಶ್ರೀಮಂತಿಕೆ ಹಾಗೂ ದುರಾಸೆಯಿಂದ ಕೂಡಿದ್ದು, ಶ್ರೀಮಂತಿಕೆ ಗಳಿಸುವ ಸ್ವಾರ್ಥಭಾವನೆಯಿಂದಾಗಿ ಕಾನೂನು ವಿರುದ್ಧವಾಗಿ ಪೈಪೋಟಿ ಮೂಲೆ-ಮೂಲೆಗಳಲ್ಲಿ ಪಸರಿಸಿದೆ ಎಂದರು.

ಕಷ್ಟಪಟ್ಟು ಶ್ರಮದ ಹಣದಿಂದ ಸಿಗುವ ಸಂತಸದ ತೃಪ್ತಿ ಮತ್ತೊಂದಿಲ್ಲ. ಕಳೆದ ದಶಕದಲ್ಲಿ ಅವಲೋಕನ ನಡೆಸಿದಾಗ ಭ್ರಷ್ಟಾಚಾರಗಳು ದಶಕಕ್ಕೊಂದು ನಡೆದ ಪ್ರಮುಖ ಹಗರಣಗಳಲ್ಲಿ ಬೋಫೋರ್ಸ್ ಹಗರಣದಲ್ಲಿ 64 ಕೋಟಿ, ಕಾಮನ್ ವೆಲ್ತ್ ಗೇಮ್ ಹಗರಣದಲ್ಲಿ 74 ಸಾವಿರ ಕೋಟಿ, ಕೋಲ್ ಗೇಟ್ 186000 ಕೋಟಿ, 2 ಜಿ ಸ್ಪೆಕ್ಟ್ರಂ 1,76,000 ಕೋಟಿ ಗಳಷ್ಟು ದೇಶಕ್ಕೆ ನಷ್ಟವಾಗಿದೆ. ಇದಕ್ಕೆ ಅಂಕಿ-ಅಂಶದ ದಾಖಲೆಗಳಿವೆ. ಇದು 1985ರಲ್ಲಿ ರಾಜೀವ್ ಗಾಂಧಿ ಹೇಳಿಕೆಯಂತೆ ದೇಶದ ಅಭಿವೃದ್ಧಿಗೆ ಮೀಸಲಿಟ್ಟ ಒಂದು ರೂಪಾಯಿಯಲ್ಲಿ 15 ಪೈಸೆ ಮಾತ್ರ ಜನರಿಗೆ ತಲುಪುತ್ತಿದೆ ಎಂಬ ಹೇಳಿಕೆ ಬೇಸರ ತರಿಸುತ್ತದೆ.



**ತೊಡಗಿದ ತೃಪ್ತಿ ಇದೆ :** ನಾನೊಬ್ಬ ನ್ಯಾಯಮೂರ್ತಿಯಾಗಿದ್ದುಕೊಂಡು, ಲೋಕಾಯುಕ್ತನಾಗಿ ಮೂರು ಸರ್ಕಾರಗಳು ನನ್ನ ವಿರುದ್ದವಾಗಿದ್ದವು.ಆದರೆ, ನನ್ನನ್ನು ನೇಮಿಸಿಕೊಂಡ ಮುಖ್ಯಮಂತ್ರಿಯ ವಿರುದ್ದವೇ ಪ್ರಕರಣ ದಾಖಲಿಸಿದೆ. ನಾನೊಬ್ಬ ನಿಸ್ವಾರ್ಥ ಸೇವಕನಾಗಿ ನಿವೃತ್ತನಾಗಿರುವೆ.

ನಾನು ಅನೇಕ ಪ್ರಶಸ್ತಿಗಳನ್ನು ಪಡೆದಿರುವೆ. ಆದರೆ 'ಜೆ.ಎಂ.ಇಮಾಂ ರಾಜ್ಯ ಪ್ರಶಸ್ತಿ' ಶ್ರೇಷ್ಠ ಪ್ರಶಸ್ತಿಯಾಗಿದೆ ಎಂದರು.

ಇಂದಿನ ಸಮಾಜದಲ್ಲಿ ಶಾಂತಿ ಸೌಹಾರ್ದತೆಗಾಗಿ ಹಿರಿಯರು ಹೇಳಿಕೊಟ್ಟ ತೃಪ್ತಿ ಮತ್ತು ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಅನ್ಯಾಯಗಳನ್ನು ಕಂಡು ಕಣ್ಣೀರಿಟ್ಟಿರುವೆ. ಮಾನವೀಯ ಮೌಲ್ಯಗಳನ್ನು ಪೋಷಕರು ಮಕ್ಕಳಲ್ಲಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಮತ್ತೊಬ್ಬರಿಗೆ ಲಂಚಕೊಡುವುದು ಮತ್ತು ಪಡೆಯುವುದು ಎರಡೂ ತಪ್ಪು. ದೇಶದಲ್ಲಿ ದುರಾಸೆಯ ಪರಿಣಾಮ ಹೆಚ್ಚಾದರೆ, ದೇಶದ ಆರ್ಥಿಕ ಪರಿಸ್ಥಿತಿ ಕುಸಿತವಾಗಿ ಅಶಾಂತಿ ರಣರಂಗದಲ್ಲಿ ಉಂಟಾಗಬಹುದು ಎಂಬ ಆತಂಕ ವ್ಯಕ್ತಪಡಿಸಿದರು.

ಲೋಕಾಯುಕ್ತನಾಗಿ ನಿಸ್ವಾರ್ಥ ಸೇವೆಯಲ್ಲಿ

> ಮಕ್ಕಳಿಗೆ ಶಿಕ್ಷಣ ಕೊಟ್ಟೆ, ಶಾಸಕನಾದೆ ನನ್ನ ಮಕ್ಕಳಿಗೆ ಶಿಕ್ಷಣ ಕೊಡಿಸಿದ ಫಲವಾಗಿ ಶಾಸಕನಾಗಿರುವೆ. ಪೋಷಕರು ಹಣ, ಆಸ್ತಿ ಗಳಿಕೆಗಿಂತ ಅವರಿಗೆ ಶಿಕ್ಷಣ ನೀಡಿ ಆಸ್ತಿಯನ್ನಾಗಿಸಿ ಕೊಳ್ಳಬೇಕು.
>
> **-ಬಿ. ದೇವೇಂದ್ರಪ್ಪ, ಶಾಸಕ**

ಹಿರಿಯ ಪತ್ರಕರ್ತ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ.ಜಗದೀಶ್ ಕೊಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಧರ್ಮ ಜಾತಿ ಎಲ್ಲೇ ಮೀರಿ ಬದುಕಿದ್ದ ರಾಜಕಾರಣಿ ಇಮಾಂ ಸಾಹೇಬರ ಸೇವೆ ಅವಿಸ್ಮರಣೀಯ ಎಂದರು.

ಮೈಸೂರು ಸಂಸ್ಥಾನದಲ್ಲಿ ಬಯಲು ಸೀಮೆ ಚಿತ್ರದುರ್ಗದ ಜನತೆಯ ಬದುಕಿಗೆ ಬಡತನವಿತ್ತು. ಆದರೆ, ಹೃದಯ ಶ್ರೀಮಂತಿಕೆ ಅಪಾರವಾಗಿತ್ತು. ಅಂದಿನ ರಾಜಕಾರಣಿಗಳು ಮೀಸಲಾತಿ, ಗ್ರಾಮೀಣಾಭಿವೃದ್ದಿ, ಶಿಕ್ಷಣ, ಆರೋಗ್ಯ, ನೀರಾವರಿ ಕನಸುಗಳ ದೂರದೃಷ್ಟಿಯನ್ನು ಹೊಂದಿದ್ದರು. ಇಮಾಂ ಸಾಹೇಬರು ಕೇವಲ ಒಬ್ಬ ರಾಜಕಾರಣಿಯಾಗದೇ ಶಿಕ್ಷಣ ತಜ್ಞರಾಗಿ, ಸಾಮಾಜಿಕ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ ಕೀರ್ತಿ ಸಲ್ಲುತ್ತದೆ ಎಂದು ಸ್ಮರಿಸಿದರು.

ಭಾರತ ದೇಶ ಬಹುಸಂಸ್ಕೃತಿಯ ನೆಲೆಬೀಡು. ಸೂಫಿ - ಸಂತರು ನೆಲೆಸಿದ್ದ ನೆಲದಲ್ಲಿ ಪೂರ್ವಜರ ಕಾಲದಿಂದಲೂ ಸಂವೇದನೆ, ಭ್ರಾತೃತ್ವದ ಬದುಕು ನಡೆಸಿದ್ದರು. ಆದರೆ, ಇಂದು ಜಾತಿ - ಧರ್ಮದ ಹೆಸರಲ್ಲಿ ಕಚ್ಚಾಡುವುದು ಮಹನೀಯರಿಗೆ ತೋರುವ ಅಪಮಾನವಾಗಿದೆ ಎಂದು ಹೇಳಿದರು.

ಇದೇ ವೇಳೆ 'ಶೌರ್ಯ ಪ್ರಶಸ್ತಿ' ಪುರಸ್ಕೃತರಾದ ಮಹಿಮಾ ಮಾನಸಿ, ಪಾಲ್ಗುಣಿಯಜ್ಞ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಜೆಎಂ ಇಮಾಂ ಟ್ರಸ್ಟ್‌ನ ಅಧ್ಯಕ್ಷ ಹುಸೇನ್ ಮಿಯಾ ಸಾಬ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪಿಂಜಾರ್, ನದಾಫ್ ಸಂಘದ ಅಧ್ಯಕ್ಷ ಜಲೀಲ್ ಸಾಬ್, ಪ್ರಶಸ್ತಿ ಸಲಹಾ ಸಮಿತಿ ಅಧ್ಯಕ್ಷ ಸಾಹಿತಿ ಎನ್. ಟಿ.ಎರ್ರಿಸ್ವಾಮಿ, ಸದಸ್ಯರಾದ ಡಿ.ಸಿ.ಮಲ್ಲಿಕಾರ್ಜುನ್, ಡಾ.ದಾದಾಪೀರ್ ನವಿಲೇಹಾಳ್, ಎಂ.ಎಸ್ ಬಸವೇಶ್, ಜೆ.ಯಾದವರೆಡ್ಡಿ, ಕೆ.ಸುಜಾತಮ್ಮ, ಎಂ. ಶಿಲ್ಪಾ, ಆಡಳಿತ ಮಂಡಳಿಯ ಮುನ್ನಾ, ಮೊಹಮದ್ ಷರೀಫ್, ಮಸ್ತಾನ್ ಸಾಬ್ ಹಾಗೂ ಮತ್ತಿತರರಿದ್ದರು.



# ಹರಿಹರ ತಾಲ್ಲೂಕಿನಲ್ಲಿ 147 ತಂಡಗಳಿಂದ ಕುಷ್ಠರೋಗ ಸಮೀಕ್ಷೆ

ಮಲೇಬೆನ್ನೂರು, ಡಿ.27- ಹರಿಹರ ತಾಲ್ಲೂಕಿನಲ್ಲಿ ಬುಧವಾರದಿಂದ 147 ತಂಡಗಳಿಂದ ಕುಷ್ಠ ರೋಗ ಸಮೀಕ್ಷೆ ಪ್ರಾರಂಭಿಸಿದ್ದು, ಎಲ್ಲಾ ಕಡೆಗಳಲ್ಲಿ ಸಮೀಕ್ಷೆ ನಡೆಯುತ್ತಿದೆ ಎಂದು ಟಿಹೆಚ್ಓ ಡಾ. ಪ್ರಶಾಂತ್ ತಿಳಿಸಿದರು.

ಭಾನುವಳ್ಳಿ, ಕಮಲಾಪುರ, ಹೊಳೆಸಿರಿಗೆರೆ ಗ್ರಾಮಗಳಿಗೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಿದ ನಂತರ ಅವರು ಮಾತನಾಡಿದರು.

ಸಮೀಕ್ಷಾ ತಂಡದಲ್ಲಿ ಮಹಿಳೆಯರಿಗೆ ಆಶಾ ಕಾರ್ಯಕರ್ತೆಯರು ಮತ್ತು ಗಂಡು ಮಕ್ಕಳಿಗೆ ಪುರುಷ ಸ್ವಯಂ ಸೇವಕರು ಎಂದು ಆಯ್ಕೆ ಮಾಡಿಕೊಂಡು, ಒಟ್ಟು 294 ಜನರು ಸಮೀಕ್ಷೆ ಮಾಡುತ್ತಿದ್ದಾರೆ. ಈ ರೋಗವು ಮೈಕ್ರೋಬ್ಯಾಕ್ಟೀರಿಯಂ ಲೆಪ್ರೆ ಎಂಬ ರೋಗಾಣುವಿನಿಂದ ಹರಡುತ್ತದೆ. ಇದೊಂದು ಸಾಂಕ್ರಾಮಿಕ ರೋಗವಾಗಿದ್ದು, ಈ ರೋಗವು ಯಾವ ಶಾಪ ಮತ್ತು ಪಾಪದಿಂದ ಬರುವುದಿಲ್ಲ ಎಂದು ಸ್ಪಷ್ಟ ಪಡಿಸಿದರು. ಇದು ಪುರಾತನ ಕಾಯಿಲೆಯಾಗಿದ್ದು, ಚರ್ಮ ಮತ್ತು ನರಗಳಿಗೆ ಸಂಬಂಧಿಸಿದೆ.

ಈ ರೋಗವು ಗಾಳಿಯ ಮೂಲಕ ಹರಡುತ್ತದೆ. ಈ ರೋಗವು ಒಬ್ಬರಿಂದ ಇನ್ನೊಬ್ಬರಿಗೆ ಹರಡಲು 5 ರಿಂದ 10 ವರ್ಷಗಳೇ ಬೇಕಾಗುತ್ತದೆ. ಆದ್ದರಿಂದ ಹಗಲು ಬೆಳಕಿನಲ್ಲಿ ಪರೀಕ್ಷಿಸಿ ಮತ್ತು ಗುರುತುಗಳು ಇವೆ ಎಂದು ನೋಡಿ, ದೇಹದ ಯಾವುದೇ ಭಾಗದಲ್ಲಿ ತಿಳಿಬಿಳಿ ತಾಮ್ರ ವರ್ಣದ ಮಚ್ಚೆ ಹಾಗೂ ಮಚ್ಚೆಗಳ ಮೇಲೆ ಸ್ಪರ್ಶ ಜ್ಞಾನ ಇರುವುದಿಲ್ಲ ಎಂದು ಡಾ. ಪ್ರಶಾಂತ್ ತಿಳಿಸಿದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಮಾತನಾಡಿ, ಜೆಎನ್ 1 ಕೊರೊನಾ ಉಪತಳಿ ಪ್ರಾರಂಭವಾಗಿರುವುದರಿಂದ ಹೊರಗಡೆ ಹೋದಾಗ ಎಲ್ಲರೂ ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಯಾರು ಭಯಪಡುವಂತಿಲ್ಲ ಎಂದರು.

ಐ.ಹೆಚ್.ಓ ನಂದಿನಿ, ಪಿ.ಸಿ.ಹೆಚ್.ಓ ಉಷಾ ಮತ್ತು ಇತರರು ಈ ವೇಳೆ ಉಪಸ್ಥಿತರಿದ್ದರು.

# ಆರೆಸ್ಸೆಸ್ ಕೇಂದ್ರ ಸ್ಥಾನ, ಅಂಬೇಡ್ಕರ್ ದೀಕ್ಷಾಭೂಮಿ ನೆಲದಲ್ಲಿ ಚುನಾವಣಾ ಸಮರ ಆರಂಭಿಸಲಿರುವ ಕಾಂಗ್ರೆಸ್

**ನಾಗಪುರ ಸಮಾವೇಶದಲ್ಲಿ ಕಾಂಗ್ರೆಸ್ ಚುನಾವಣಾ ರಣಕಹಳೆ**

ನಾಗಪುರ, ಡಿ. 27 - ಕಾಂಗ್ರೆಸ್ ಪಕ್ಷವು 139ನೇ ಸ್ಥಾಪನಾ ದಿನಾಚರಣೆಯ ಅಂಗವಾಗಿ ಮಹಾರಾಷ್ಟ್ರದ ನಾಗಪುರದಲ್ಲಿ ಪಕ್ಷ ಬೃಹತ್ ಸಮಾವೇಶ ಆಯೋಜಿಸಿದೆ. 'ಹೈ ತಯ್ಯಾರ್ ಹಮ್' (ನಾವು ಸಿದ್ಧವಾಗಿದ್ದೇವೆ) ಎಂಬ ಘೋಷಣೆಯೊಂದಿಗೆ ನಡೆಯಲಿರುವ ಈ ಸಮಾವೇಶ, ಲೋಕಸಭಾ ಚುನಾವಣಾ ಅಭಿಯಾನ ಆರಂಭದ ರಣಕಹಳೆಯೂ ಆಗಿರಲಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ, ಈ ಸಮಾವೇಶವು ದೇಶದ ಜನರಿಗೆ ಐತಿಹಾಸಿಕ ಕ್ಷಣವಾಗಲಿದೆ ಎಂದಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿ ಅಧ್ಯಕ್ಷರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ನಾಯಕರು ಹೇಳಿದ್ದಾರೆ.

ಆರ್.ಎಸ್.ಎಸ್. ಕೇಂದ್ರ ಕಚೇರಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದ ದೀಕ್ಷಾಭೂಮಿ ನಾಗಪುರದಲ್ಲಿದೆ. ಈ ಹಿನ್ನೆಲೆಯಲ್ಲಿ ನಾಗಪುರದ ಸಮಾವೇಶ ಪ್ರಾಮುಖ್ಯತೆ ಪಡೆದುಕೊಂಡಿದೆ.

'ನಾವು ಸಿದ್ಧವಾಗಿದ್ದೇವೆ' ಎಂಬ ಈ ಸಮಾವೇಶವು ದೇಶದ ಜನರಿಗೆ ಉತ್ತಮ ಸಂದೇಶ ನೀಡಲಿದೆ. ಕಾಂಗ್ರೆಸ್ ಪಕ್ಷ ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೆ ರಣಕಹಳೆ ಮೊಳಗಿಸಲಿದೆ ಎಂದು ನಾಗಪುರದ ಶಾಸಕ ನಿತಿನ್ ರಾವತ್ ಹೇಳಿದ್ದಾರೆ.

ನಾಗಪುರದ ದಿಘೋರಿಯಲ್ಲಿ ನಡೆಯಲಿರುವ ಬೃಹತ್ ಸಮಾವೇಶಕ್ಕೆ ಭಾರೀ ಸಿದ್ಧತೆಗಳು ನಡೆದಿವೆ. ಲಕ್ಷಾಂತರ ಕಾರ್ಯಕರ್ತರು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ನಾಯಕರು ಹೇಳಿದ್ದಾರೆ.

ದೇಶ ಸಮಸ್ಯೆ ಎದುರಿಸಿದ ಸಂದರ್ಭದಲ್ಲಿ ಕಾಂಗ್ರೆಸ್ ಮಧ್ಯ ಪ್ರವೇಶಿಸಿ ಬೃಹತ್ ಬದಲಾವಣೆ ತಂದಿದೆ. ತುರ್ತು ಪರಿಸ್ಥಿತಿ ನಂತರ ಆಗಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ನಾಗಪುರದಲ್ಲಿ ಸಮಾವೇಶ ನಡೆಸಿದ್ದರು. ನಂತರ ವಿದರ್ಭದ ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು ಎಂದು ಪಟೋಲೆ ಹೇಳಿದ್ದಾರೆ.

ಇತಿಹಾಸ ನಾಗಪುರದಲ್ಲಿ ಮತ್ತೆ ಪುನರಾವರ್ತನೆಯಾಗಲಿದೆ. ದೇಶದಲ್ಲಿ ಪರಿವರ್ತನೆ ಆಗಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ದೇವರ ತಿಮ್ಮಲಾಪುರದಲ್ಲಿ ವೆಂಕಟೇಶ್ವರ ರಥೋತ್ಸವ



ಹರಪನಹಳ್ಳಿ, ಡಿ. 27 - ಪಟ್ಟಣ ಸಮೀಪದ ದೇವರ ತಿಮ್ಮಲಾಪುರ ಗ್ರಾಮದ ಇತಿಹಾಸ ಪ್ರಸಿದ್ದ ಲಕ್ಷ್ಮಿ ವೆಂಕಟೇಶ್ವರ ರಥೋತ್ಸವ ಮಂಗಳವಾರ ರಾತ್ರಿ ಅಪಾರ ಭಕ್ತರ ಮಧ್ಯೆ ಅತ್ಯಂತ ಸಡಗರ, ಸಂಭ್ರಮದಿಂದ ಜರುಗಿತು. ರಾತ್ರಿ ಸರಿಯಾಗಿ 7.17ಕ್ಕೆ ರಥದ ಗಾಲಿಗಳು ಉರುಳಿದಾಗ ಭಕ್ತರು ಗೋವಿಂದ ಗೋವಿಂದ ಎನ್ನುತ್ತಾ ಬಾಳೆ ಹಣ್ಣು ತೂರಿ ಭಕ್ತಿ ಸಮರ್ಪಿಸಿದರು.

ಬಾವುಟವನ್ನು 2.12 ಲಕ್ಷಕ್ಕೆ ಮತ್ತೂರು ಕೆ. ಬಸವರಾಜ ಹರಾಜಿನಲ್ಲಿ ಪಡೆದುಕೊಂಡರು. ಹೂವಿನ ಹಾರವನ್ನು 31 ಸಾವಿರಗಳಿಗೆ ಬಳ್ಳಾರಿ ರಾಮ ಪ್ರಸಾದ್ ಹರಾಜಿನಲ್ಲಿ ಪಡೆದುಕೊಂಡರು.

ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಧರ್ಮದರ್ಶಿ ಕಟ್ಟಿ ಹರ್ಷ, ದಂಡಿನ ಹರೀಶ, ಕಾಂಗ್ರೆಸ್ ಹಿರಿಯ ಮುಖಂಡ ಸಿ. ಚಂದ್ರಶೇಖರ ಭಟ್, ಜಿ.ಬಿ. ವಿನಯಕುಮಾರ, ಸಿಪಿಐ. ನಾಗರಾಜ, ಎಂ. ಕಮ್ಮಾರ, ಪಿಎಸ್ಐ ಶಂಭುಲಿಂಗ ಹಿರೇಮಠ, ಧಾರ್ಮಿಕ ದತ್ತಿ ಇಲಾಖೆಯ ರಮೇಶ್, ಶಿವಕುಮಾರ, ಪುರಸಭಾ ಸದಸ್ಯರು ಎಂ.ವಿ. ಅಂಜಿನಪ್ಪ, ಗೊಂಗಡಿ ನಾಗರಾಜ, ಲಾಟಿ ದಾದಾಪೀರ್, ಹಾಗೂ ಶಿವರಾಜ, ಡಾ. ರಮೇಶಕುಮಾರ್ ಹಾಜರಿದ್ದರು.

# ಅವೈಜ್ಞಾನಿಕ ಕೆಳ ಸೇತುವೆಗಳನ್ನು ಸರಿಪಡಿಸಲು ನಿರ್ದೇಶನ

**(1ನೇ ಪುಟದಿಂದ)** ಸರಿಪಡಿಸಬೇಕು. ಇನ್ನು ಮುಂದೆ ಯಾವುದೇ ಅವೈಜ್ಞಾನಿಕ ಕಾಮಗಾರಿಯಾಗುವುದನ್ನು ಸಹಿಸುವುದಿಲ್ಲ ಎಂದು ತಿಳಿಸಿದರು.

ಸರ್ವೀಸ್ ರಸ್ತೆಯ ಕೆಲಸಗಳನ್ನು ಸಮರ್ಪಕವಾಗಿ ಮುಗಿಸಿ ಸಂಪರ್ಕ ಕಲ್ಪಿಸಬೇಕು. ಸರ್ವೀಸ್ ರಸ್ತೆ ಇಲ್ಲದೇ ಅಪಘಾತ ಹೆಚ್ಚಾಗುತ್ತಿದೆ. ಈಗ ತಂತ್ರಜ್ಞಾನ ಸಾಕಷ್ಟು ಮುಂದುವರೆದಿದೆ. ಇಂತಹ ಸಂದರ್ಭದಲ್ಲೂ ಅವೈಜ್ಞಾನಿಕ ಕಾಮಗಾರಿ ಸಲ್ಲದು ಎಂದು ತಿಳಿಸಿದರು.

ಸಾರ್ವಜನಿಕರ ಜೀವಕ್ಕೆ ಬೆಲೆ ಕೊಡುವ ರೀತಿಯಲ್ಲಿ ಹಾಗೂ ಅಪಘಾತಗಳಿಗೆ ಅವಕಾಶವಾಗದ ರೀತಿಯಲ್ಲಿ ಕಾಮಗಾರಿ ನಡೆಯಬೇಕು. ಇಲ್ಲದಿದ್ದರೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಗೌರವ್, ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ದೂಡಾ ಆಯುಕ್ತ ಬಸವನಗೌಡ ಕೋಟೂರು, ತಹಶೀಲ್ದಾರ್ ಅಶ್ವತ್ಥ್, ಪಾಲಿಕೆ ಆಯುಕ್ತೆ ರೇಣುಕಾ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಪ್ರಭಾಕರ್ ಭಟ್ ಬಂಧನಕ್ಕೆ ಆಗ್ರಹ

ಮಹಿಳೆಯರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಬಂಧಿಸು ವಂತೆ ಒತ್ತಾಯಿಸಿ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗ ಮತ್ತು ಅಲ್ಪ ಸಂಖ್ಯಾತರ ವೇದಿಕೆ ವತಿಯಿಂದ ಮಹಾನಗರ ಪಾಲಿಕೆ ಎದುರು ಇಂದು ಬೆಳಿಗ್ಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

## ಎಂ.ಫಿಲ್. ಪದವಿಗೆ ಮಾನ್ಯತೆ ಇಲ್ಲ : ಯು.ಜಿ.ಸಿ.

ನವದೆಹಲಿ, ಡಿ. 27 – ಎಂ.ಫಿಲ್ ಪದವಿಗಳನ್ನು ಕೊಡದಂತೆ ವಿಶ್ವವಿದ್ಯಾಲಯಗಳಿಗೆ ಯು.ಜಿ.ಸಿ. (ವಿಶ್ವವಿದ್ಯಾಲಯ ಧನಸಹಾಯ ಆಯೋಗ) ತಿಳಿಸಿದ್ದು, ಎಂ.ಫಿಲ್. ಮಾನ್ಯತೆ ಪಡೆದ ಪದವಿ ಅಲ್ಲ. ವಿದ್ಯಾರ್ಥಿಗಳು ಇಂತಹ ಕೋರ್ಸ್‌ಗಳಿಗೆ ಸೇರಬಾರದು ಎಂದು ಹೇಳಿದೆ. ಕೆಲ ವಿಶ್ವವಿದ್ಯಾಲಯಗಳು ಎಂ. ಫಿಲ್ (ಮಾಸ್ಟರ್ ಆಫ್ ಫಿಲಾಸಫಿ) ಅಧ್ಯಯನಕ್ಕೆ ಪ್ರವೇಶ ನೀಡುವುದಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿವೆ. ಆದರೆ, ಇದು ಮಾನ್ಯತೆ ಪಡೆದ ಪದವಿ ಅಲ್ಲ ಎಂದು ಯು.ಜಿ.ಸಿ. ಹೇಳಿದೆ. ಎಂ.ಫಿಲ್ ಯೋಜನೆ ನಡೆಸಬಾರದು ಎಂದು ಯು.ಜಿ.ಸಿ.ಯ ನಿಯಮಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಈ ರೀತಿಯ ಯಾವುದಾದರೂ ಯೋಜನೆ ಇದ್ದರೆ ತಕ್ಷಣವೇ ನಿಲ್ಲಿಸಬೇಕು ಎಂದು ಯು.ಜಿ.ಸಿ. ಕಾರ್ಯದರ್ಶಿ ಮನೀಶ್ ಜೋಷಿ ಹೇಳಿದ್ದಾರೆ.

## ಕುಂದುವಾಡ : ಕಾರ್ತಿಕ

ದಾವಣಗೆರೆ, ಡಿ.27- ಶ್ರೀ ಬನ್ನಿಮಹಾಂಕಾಳಿ, ಶ್ರೀ ಗಡಿ ಚೌಡೇಶ್ವರಿ, ಶ್ರೀ ಆಂಜನೇಯ ಸ್ವಾಮಿಯ ಹಾಗೂ ಎಲ್ಲಾ ದೇವರುಗಳ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 29ರ ಶುಕ್ರವಾರ ಸಂಜೆ 6.30 ಕ್ಕೆ ನಡೆಯಲಿದೆ.

## ಶಾಮನೂರಿನ ಶ್ಯಾಗಲೆ ರಂಗಪ್ಪ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ಶ್ಯಾಗಲೆ ರಂಗಪ್ಪ (70) ಅವರು ದಿನಾಂಕ 27.12.2023ರ ಬುಧವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.12.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಆರೋಪ - ಪ್ರತ್ಯಾರೋಪ ಬಿಡಿ, ಹೊಂದಾಣಿಕೆ ಭಾವದಲ್ಲಿ ಕೆಲಸ ಮಾಡಿ

**ಹರಿಹರ ತಾ.ಪಂ. ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳಿಗೆ ಜಿಪಂ ಲೆಕ್ಕಾಧಿಕಾರಿ ಸಿ.ಪಿ. ಸೌಮ್ಯಶ್ರೀ ಸಲಹೆ**



ಹರಿಹರ, ಡಿ.27- ಅಧಿಕಾರಿಗಳು ಬೇರೆ ಇಲಾಖೆಯ ಮೇಲೆ ಆರೋಪ, ಪ್ರತ್ಯಾರೋಪ ಮಾಡುವುದರ ಬದಲಿಗೆ ಹೊಂದಾಣಿಕೆ ಭಾವದಲ್ಲಿ ಸಾಗಿದಾಗ, ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪಂಚಾಯತಿ ಲೆಕ್ಕಾಧಿಕಾರಿ ಸಿ.ಪಿ. ಸೌಮ್ಯಶ್ರೀ ಸಲಹೆ ನೀಡಿದರು.

ನಗರದ ತಾಪಂ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ತ್ರೈಮಾಸಿಕ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಈಗಾಗಲೇ ರಾಜ್ಯದಾದ್ಯಂತ ಮಳೆ ಇಲ್ಲದೆ ಬರಗಾಲ ಹೆಚ್ಚಾಗಿದೆ. ಜೊತೆಗೆ ಕೊರೊನಾವೂ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ವಿದ್ಯುತ್ ಪೂರೈಕೆ ಸೇರಿದಂತೆ ಹಲವಾರು ಬಗೆಯಲ್ಲಿ ಸಮಸ್ಯೆಗಳು ಉಲ್ಬಣಗೊಳ್ಳುವುದು ಸಹಜ. ಎಲ್ಲಾ ಇಲಾಖೆಯ ಅಧಿಕಾರಿಗಳು ಮುತುವರ್ಜಿಯಿಂದ ಕರ್ತವ್ಯ ನಿಭಾಯಿಸುವುದು ಅವಶ್ಯವಾಗಿದೆ ಎಂದು ಹೇಳಿದರು.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಇರುವ ಇಟ್ಟಿಗೆ ಬಟ್ಟಿಗಳಿಗೆ ವಲಸೆ ಬರುವಂತಹ ಕಾರ್ಮಿಕರಿಗೆ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ, ಇಟ್ಟಿಗೆ ಬಟ್ಟಿಗಳ ಸ್ಥಳದಲ್ಲಿ ತಾತ್ಕಾಲಿಕವಾಗಿ ಟೆಂಟ್ ಹಾಕಿ ಶಾಲೆಗಳನ್ನು ತೆರೆದು ಅವರಿಗೆ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಸಿಡಿಪಿಓ, ಬಿಇಓ ಮತ್ತು ಕಾರ್ಮಿಕ ಇಲಾಖೆ ಅಧಿಕಾರಿಗಳು ಮುಂದಾಗಬೇಕು ಎಂದು ಸೌಮ್ಯಶ್ರೀ ಕಿವಿಮಾತು ಹೇಳಿದರು.

ಬಿಇಓ ಹನುಮಂತಪ್ಪ ಮಾತನಾಡಿ, ಈ ಬಾರಿ ಎಸ್.ಎಸ್.ಎಲ್.ಸಿ.ಯಲ್ಲಿ 3285 ವಿದ್ಯಾರ್ಥಿಗಳಿಂದ ಉತ್ತಮ ಫಲಿತಾಂಶ ಬರುವ ನಿಟ್ಟಿನಲ್ಲಿ ಎಲ್ಲಾ ಬಗೆಯ ಪೂರ್ವ ತಯಾರಿ ನಡೆಸಲಾಗಿದೆ.

ಇಟ್ಟಿಗೆ ಬಟ್ಟಿಯಲ್ಲಿರುವ 34 ಕಾರ್ಮಿಕರ ಮಕ್ಕಳು ವಲಸೆ ಕಾರ್ಡನ್ನು ಪಡೆದುಕೊಂಡು ಬಂದಿದ್ದರಿಂದ ಅವರಿಗೆ ಟೆಂಟ್ ಹಾಕಿ ಸ್ಥಳದಲ್ಲೇ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

ಕೃಷಿ ಇಲಾಖೆಯ ನಾರನಗೌಡ ಮಾತನಾಡಿ, ತಾಲ್ಲೂಕಿನಲ್ಲಿ ಈ ಬಾರಿ ಮಳೆಯ ಪ್ರಮಾಣ ಕಡಿಮೆಯಾಗಿ, ಮಳೆ ಆಶ್ರಿತ ಪ್ರದೇಶದಲ್ಲಿ ಸುಮಾರು 6127 ಹೆಕ್ಟೇರ್ ಮೆಕ್ಕೆಜೋಳ, ಅಲಸಂದಿ, ಜೋಳ, ಸೋಯಾಬಿನ್, ತೊಗರಿ ಬೆಳೆಗಳಿಗೆ ಹಾನಿಯಾಗಿದ್ದು, ತಾಲ್ಲೂಕಿನಲ್ಲಿ ಜಂಟಿ ಸರ್ವೆ ಮಾಡಿ 5 ಕೋಟಿ ರೂಪಾಯಿ ಬೆಳೆ ಹಾನಿಯಾಗಿರುವ ವರದಿಯನ್ನು ಸರ್ಕಾರಕ್ಕೆ ಕಳಿಸಲಾಗಿದೆ ಎಂದು ಹೇಳಿದರು.

ಪಂಚಾಯತ್ ರಾಜ್ ಇಲಾಖೆಯ ಗಿರೀಶ್ ಮಾತನಾಡಿ, ತಾಲ್ಲೂಕಿನ ಬೆಳ್ಳೂಡಿ ಮತ್ತು ರಾಮತೀರ್ಥ ಗ್ರಾಮದ ಮಧ್ಯೆ ಹಲವಾರು ಹಳ್ಳಿಗೆ ಸಂಪರ್ಕವನ್ನು ಹೊಂದಿರುವ ಸೇತುವೆ ಶಿಥಿಲವಾಗಿದೆ. ಸರ್ಕಾರಕ್ಕೆ 5 ಕೋಟಿ ರೂ. ವೆಚ್ಚದಲ್ಲಿ ಹೊಸದಾದ ಸೇತುವೆಯ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಹೇಳಿದರು.

ಆರೋಗ್ಯ ಇಲಾಖೆಯ ಡಾ. ಪ್ರಶಾಂತ್ ಮಾತನಾಡಿ. ಕೊರೊನಾ ಹಿನ್ನೆಲೆಯಲ್ಲಿ ನಮ್ಮ ಇಲಾಖೆಯ ವತಿಯಿಂದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಮಿಕ ಇಲಾಖೆಯ ಕವಿತಾ ಮಾತನಾಡಿ, ನಗರ ಸೇರಿದಂತೆ ತಾಲ್ಲೂಕಿನಲ್ಲಿ 535 ನಕಲಿ ಕಟ್ಟಡ ಕಾರ್ಮಿಕ ಕಾರ್ಡ್ ಗಳನ್ನು ಹೊಂದಿದವರನ್ನು ಪತ್ತೆ ಮಾಡಲಾಗಿದೆ. ಅಂತಹ ಕಾರ್ಡನ್ನು ಹೊಂದಿದವರಿಗೆ ಸರ್ಕಾರದ ಯಾವುದೇ ಸೌಲಭ್ಯಗಳನ್ನು ಕೊಡಲಾಗುವುದಿಲ್ಲ ಎಂದು ಹೇಳಿದರು.

ತಾಪಂ ಇಓ ರಮೇಶ್ ಸುಲ್ಫಿ, ಸಿಡಿಪಿಓ ಇಲಾಖೆ ಪೂರ್ಣಿಮಾ, ತಾಪಂ ಲೆಕ್ಕಾಧಿಕಾರಿ ಲಿಂಗರಾಜ್, ಬಿಸಿಎಂ ಇಲಾಖೆ ಆಸ್ಮಾಭಾನು, ತೋಟಗಾರಿಕೆ ಇಲಾಖೆ ಸಿದ್ದಪ್ಪ, ಅರಣ್ಯ ಇಲಾಖೆ ಅಮೃತ, ತಾಪಂ ಇಲಾಖೆ ಸ್ವಪ್ನ, ಶೋಭಾ, ನಾಗರಾಜ್ ವಿದ್ಯುತ್ ಇಲಾಖೆ ಮಹಾವೀರ, ಶಾಸಕರ ಆಪ್ತ ಸಹಾಯಕ ಶಿವಶಂಕರ್ ಚಿಕ್ಕಬಿದರಿ, ವಿನಾಯಕ ಆರಾಧ್ಯಮಠ ಹಾಗು ಇತರರು ಹಾಜರಿದ್ದರು.

## ಲೈಂಗಿಕ ಪೀಡನೆ : ಮಾಹಿತಿ ಹಕ್ಕಿನಿಂದ ಇಡಿಗೆ ವಿನಾಯಿತಿ ಇಲ್ಲ

ನವದೆಹಲಿ, ಡಿ. 27 – ಜಾರಿ ನಿರ್ದೇಶನಾಲಯಕ್ಕೆ (ಇ.ಡಿ.) ಮಾಹಿತಿ ಹಕ್ಕು ಕಾಯ್ದೆಯಿಂದ ವಿನಾಯಿತಿ ಇದೆ. ಆದರೆ, ಲೈಂಗಿಕ ಪೀಡನೆ ಸೇರಿದಂತೆ, ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳಲ್ಲಿ ಮಾಹಿತಿ ನೀಡಬೇಕಾಗುತ್ತದೆ ಎಂದು ದೆಹಲಿ ಹೈಕೋರ್ಟ್ ತಿಳಿಸಿದೆ.

ನೇಮಕಾತಿ ನಿಯಮಗಳು ಹಾಗೂ ಲೈಂಗಿಕ ಪೀಡನೆ ಆರೋಪಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ಕೇಂದ್ರ ಮಾಹಿತಿ ಆಯೋಗವು ಜಾರಿ ನಿರ್ದೇಶನಾಲಯಕ್ಕೆ ತಿಳಿಸಿತ್ತು. ಈ ಆದೇಶ ಪ್ರಶ್ನಿಸಿ ಆಯೋಗವು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

ನೇಮಕಾತಿ ನಿಯಮಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ವಿವರಗಳನ್ನು ಜಾರಿ ನಿರ್ದೇಶನಾಲಯ ತಿಳಿಸಬೇಕಿಲ್ಲ. ಆದರೆ, ಲೈಂಗಿಕ ಪೀಡನೆ ಕುರಿತ ಮಾಹಿತಿಯನ್ನು ಎಂಟು ವಾರಗಳಲ್ಲಿ ನೀಡಬೇಕು ಎಂದು ಹೈಕೋರ್ಟ್ ಹೇಳಿದೆ.

## ಹರಿಹರದ ಡಿ. ಧರ್ಮಸಿಂಗ್ ನಿಧನ



ಹರಿಹರ ವಿದ್ಯಾನಗರ ವಾಸಿ ಹಾಗೂ ಲಿಕ್ಕರ್ ಉದ್ಯಮಿ

**ಶ್ರೀ ಡಿ. ಧರ್ಮಸಿಂಗ್** (76 ವರ್ಷ)

ಇವರು ದಿನಾಂಕ 27.12.2023ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.12.2023ರ ಗುರುವಾರ ಬೆಳಿಗ್ಗೆ 9.45ಕ್ಕೆ ಹರಿಹರ ನಗರದ ದಾಲ್ಮಿಯಾ ಘಾಟ್‌ನಲ್ಲಿ ನೆರವೇರಲಿದೆ.

**: ದುಃಖತಪ್ತರು :**

ಪತ್ನಿ : **ಶ್ರೀಮತಿ ಶೋಭಾ ಧರ್ಮಸಿಂಗ್**

ಪುತ್ರ : **ವಿಕ್ರಮಸಿಂಗ್,** ಪುತ್ರಿ : **ಶ್ರೀಮತಿ ಶೀತಲ್ ಹನುಮಾನ್‌ಸಿಂಗ್**

**ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.**

**ಮೊ : 98441 27137, 94800 24314**

## ನಗರದಲ್ಲಿ ಇಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ದಾವಣಗೆರೆ, ಡಿ. 27 - ಜವಾಹರ್ ಬಾಲ್ ಮಂಚ್ ಜಿಲ್ಲಾ ಸಮಿತಿ ವತಿಯಿಂದ ನಾಳೆ ದಿನಾಂಕ 28 ರ ಗುರುವಾರ ಮಧ್ಯಾಹ್ನ 2 ಗಂಟೆಗೆ 'ವಿವಿಧತೆಯಲ್ಲಿ ಏಕತೆ' ವಿಷಯದ ಬಗ್ಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಜವಾಹರ್ ಬಾಲ್ ಮಂಚ್ ಅಧ್ಯಕ್ಷ ಹೆಚ್.ಜೆ. ಮೈನುದ್ದೀನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ನಗರದ ಶ್ರೀ ಹುಚ್ಚನಾಗಲಿಂಗೇಶ್ವರ ಅನಾಥಾಶ್ರಮದ ಮಕ್ಕಳನ್ನು ಇದೇ ದಿನಾಂಕ 31 ರಂದು ಚಿತ್ರದುರ್ಗ ಮುರುಘಾಮಠಕ್ಕೆ ಹೊರ ಸಂಚಾರಕ್ಕೆ ಕರೆದುಕೊಂಡು ಹೋಗಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಮ್ಜದ್ ಖಾನ್, ಚಿರಂಜೀವಿ, ಸಲ್ಮಾಬಾನು, ಫಯಾಜ್, ಖಾಜಾ ಮೈನುದ್ದೀನ್ ಉಪಸ್ಥಿತರಿದ್ದರು.

## ಯಾರಿಗೂ ಹೇಳದೇ ಲ್ಯಾಂಡ್ ಕ್ರೂಸರ್ ಖರೀದಿಸಿದ್ದ ಕೆಸಿಆರ್



ಹೈದರಾಬಾದ್, ಡಿ 27 – ಬಿ.ಆರ್.ಎಸ್. ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸದಲ್ಲಿ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಸರ್ಕಾರ 22 ಟೊಯೊಟೊ ಲ್ಯಾಂಡ್ ಕ್ರೂಸರ್ ವಾಹನಗಳನ್ನು ಯಾರ ತಿಳುವಳಿಕೆಯೂ ಇಲ್ಲದೇ ಖರೀದಿಸಿತ್ತು ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನನಗಾಗಿ ಯಾವುದೇ ಹೊಸ ವಾಹನ ಖರೀದಿಸಬಾರದು ಎಂದು ಅಧಿಕಾರ ವಹಿಸಿಕೊಂಡ ತಕ್ಷಣ ಅಧಿಕಾರಿಗಳಿಗೆ ಹೇಳಿದ್ದೆ. ಆದರೆ, ಹಿಂದಿನ ಸರ್ಕಾರ 22 ಲ್ಯಾಂಡ್ ಕ್ರೂಸರ್‌ಗಳನ್ನು ಖರೀದಿಸಿ, ಅದನ್ನು ವಿಜಯವಾಡದಲ್ಲಿ ಇರಿಸಿತ್ತು ಎಂದು ಹೇಳಿದರು.

ಮುಖ್ಯಮಂತ್ರಿಯಾದ ಹತ್ತು ದಿನಗಳವರೆಗೂ ನನಗೂ ಈ ವಿಷಯ ತಿಳಿದಿರಲಿಲ್ಲ. 22 ವಾಹನಗಳನ್ನು ಈಗಾಗಲೇ ಖರೀದಿಸಲಾಗಿದೆ. ರಾವ್ ಅವರು ಮತ್ತೆ ಮುಖ್ಯಮಂತ್ರಿಯಾದ ನಂತರ ಈ ವಾಹನಗಳನ್ನು ಪ್ರಮಾಣ ವಚನ ಸ್ವೀಕಾರಕ್ಕೆ ತರಬೇಕು ಎಂದು ತಿಳಿಸಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ ಎಂದರು.

ಇವು ಗುಂಡು ನಿರೋಧಕ ವಾಹನಗಳಾಗಿರುವ ಕಾರಣ, ಪ್ರತಿಯೊಂದರ ಬೆಲೆ 3 ಕೋಟಿ ರೂ. ಆಗಿದೆ. ಈ ರೀತಿ ಕೆ.ಸಿ.ರಾವ್ ರಾಜ್ಯಕ್ಕಾಗಿ ಸಂಪತ್ತು ಸೃಷ್ಟಿಸಿದ್ದಾರೆ ಎಂದು ರೇವಂತ್ ರೆಡ್ಡಿ ಲೇವಡಿ ಮಾಡಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ರಾಮಮಂದಿರ ಪ್ರತಿಷ್ಠಾಪನೆ : ಅಯೋಧ್ಯೆಯ ಅಂಗಡಿಗಳ ಶೆಟರ್‌ಗಳೂ ರಾಮಮಯ



ಅಯೋಧ್ಯೆ, ಡಿ. 27 – ಅಯೋಧ್ಯೆಯ ರಾಮ ಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ದೇವಾಲಯದ ಮುಖ್ಯ ಬೀದಿ ಸೇರಿದಂತೆ, ಎಲ್ಲಾ ಬೀದಿಗಳ ಅಂಗಡಿಗಳ ಶೆಟರ್‌ಗಳು ಹಿಂದೂ ಶೈಲಿಯ ವರ್ಣಚಿತ್ರಗಳನೊಂದಿಗೆ ರಾರಾಜಿಸುತ್ತಿವೆ.

ಜನವರಿ 22ರಂದು ದೇವಾಲಯದ ಉದ್ಘಾಟನೆ ನೆರವೇರಲಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳು ಅಂಗಡಿಗಳ ಶೆಟರ್‌ಗಳ ಮೇಲೆ ಜೈ ಶ್ರೀರಾಮ್, ಸ್ವಸ್ತಿಕ್, ಹನುಮಂತ ದೇವರು ಮುಂತಾದ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಚಿತ್ರ ಬರೆಸಿದ್ದಾರೆ.

ಶಹದತ್‌ಗಂಜ್ ಹಾಗೂ ನಯಾ ಘಾಟ್ ನಡುವಿನ 13 ಕಿ.ಮೀ. ಮಾರ್ಗಕ್ಕೆ ರಾಮ ಪಥ ಎಂಬ ಹೆಸರು ನೀಡಲಾಗಿದೆ. ಈ ಮಾರ್ಗದ ಎರಡೂ ಬದಿಗಳಲ್ಲಿ ಸಾಕಷ್ಟು ಅಂಗಡಿಗಳಿವೆ.

ಕಳೆದ ಎರಡು ವರ್ಷಗಳಲ್ಲಿ ಈ ಮಾರ್ಗವನ್ನು ಮರು ಅಭಿವೃದ್ಧಿ ಪಡಿಸಲಾಗಿದೆ. ಹಲವು ಕಟ್ಟಡಗಳನ್ನು ಧ್ವಂಸಗೊಳಿಸುವ ಮೂಲಕ ರಸ್ತೆಯನ್ನು ಎರಡೂ ಕಡೆ ವಿಸ್ತರಿಸಲಾಗಿದೆ. ಹಲವು ಹಳೆಯ ಕಟ್ಟಡಗಳನ್ನು ಸ್ಥಳಾಂತರಗೊಳಿಸಲಾಗಿದೆ.

ಸೌಂದರ್ಯೀಕರಣದ ಅಭಿಯಾನದ ಹಿನ್ನೆಲೆಯಲ್ಲಿ ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಅಯೋಧ್ಯೆ ಆಯುಕ್ತರ ಕಚೇರಿಗಳು ಈ ದಿಸೆಯಲ್ಲಿ ಜೊತೆಯಾಗಿ ಕಾರ್ಯ ನಿರ್ವಹಿಸಿವೆ ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಾಮ ಪಥದ ಅಂಗಡಿಗಳಲ್ಲಿ ಒಂದೇ ರೀತಿಯ ಬೋರ್ಡುಗಳನ್ನು ಅಳವಡಿಸಲಾಗಿದೆ. ಇವುಗಳ ಮೇಲೆ ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರದ ಚಿಹ್ನೆ ಇದೆ.

ಪ್ರತಿ ಶೆಟರ್ ಮೇಲೆ ಹಿಂದೂ ಸಂಸ್ಕೃತಿ ಬಿಂಬಿಸುವ ಕಲಾಕೃತಿಗಳನ್ನು ರಚಿಸಲಾಗಿದೆ. ಮಾರುಕಟ್ಟೆಗಳು ರಾತ್ರಿ ಮುಚ್ಚಿದ ಸಂದರ್ಭದಲ್ಲಿ ಇಡೀ ಪ್ರದೇಶ ಹೊಸ ಸ್ವರೂಪ ಪಡೆದುಕೊಳ್ಳಲಿದೆ.

ಇಲ್ಲಿನ ಬಿರ್ಲಾ ಧರ್ಮಶಾಲೆ ಬಳಿಯ ರೆಸ್ಟೋರೆಂಟ್ ಒಂದನ್ನು ರಾಮ ಮಂದಿರ ವಿನ್ಯಾಸದ ರೀತಿ ರೂಪಿಸಿರುವುದು ಪ್ರಮುಖ ಆಕರ್ಷಣೆಯಾಗಿದೆ.

ಈ ಕ್ರಮಗಳ ಬಗ್ಗೆ ಮಾತನಾಡಿರುವ ಹೋಮಿಯೋಪತಿ ವೈದ್ಯ ಸುನೀಲ್ ಕುಮಾರ್ ತೋಮರ್, ಸರ್ಕಾರದ ನಿರ್ದೇಶನದಂತೆ ಕಲಾವಿದರು ಶೆಟರ್‌ಗಳನ್ನು ವರ್ಣಮಯಗೊಳಿಸಿದ್ದಾರೆ. ಇಡೀ ನಗರ ಈಗ ರಾಮಮಯವಾಗಿದೆ ಎಂದಿದ್ದಾರೆ.

ಸರ್ಕಾರ ಕೈಗೊಂಡಿರುವ ಕಾಮಗಾರಿಯ ಬಗ್ಗೆ ತಿಳಿದಿತ್ತು. ಒಂದು ದಿನ ಆಸ್ಪತ್ರೆಯ ಬಾಗಿಲು ತೆರೆಯಲು ಬಂದಾಗ ಹನುಮಂತ ದೇವರ ಚಿತ್ರ ಬಿಡಿಸಲಾಗಿತ್ತು. ಇದು ಅಚ್ಚರಿಯ ಜೊತೆ ಸಂತೋಷ ತಂದಿದೆ. ನಾನು ಹನುಮಾನ್‌ಘಡಿ ದೇವಾಲಯದ ಸಮೀಪವೇ ಬೆಳೆದಿದ್ದೆ ಎಂದು ಹೇಳಿದ್ದಾರೆ.

ರಾಮಜನ್ಮಭೂಮಿ ಸಂಪರ್ಕಿಸುವ ಇತರೆ ರಸ್ತೆಗಳಿಗೆ ಶ್ರೀ ರಾಮ ಜನ್ಮಭೂಮಿ ಪಥ ಹಾಗೂ ಭಕ್ತಿ ಪಥ ಎಂಬ ಹೆಸರುಗಳನ್ನು ಇಡಲಾಗಿದೆ.

## ಜೆ.ಎಂ.ಎಸ್ ಅಕಾಡೆಮಿಗೆ ರ್‍ಯಾಂಕ್



ಅಂಜುಮ್ ಬಾನು



ಪಿ. ಅಶ್ವಿನಿ



ಹರ್ಷಿತ



ಹರ್ಷಿತ, ಪಿ.

ದಾವಣಗೆರೆ, ಡಿ. 27 - ದಾವಣಗೆರೆ ವಿಶ್ವವಿದ್ಯಾನಿಲಯವು ಕಳೆದ ಆಗಸ್ಟ್/ ಸೆಪ್ಟೆಂಬರ್ – 2023 ರಲ್ಲಿ ನಡೆಸಿದ ಪದವಿ ಪರೀಕ್ಷೆಯಲ್ಲಿ ನಗರದ ಜಿ.ಎಂ.ಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜಿನ ಬಿ.ಎಸ್ಸಿ ವಿಭಾಗದಿಂದ ಪಿ. ಹರ್ಷಿತ ಮೂರನೇ ರ್‍ಯಾಂಕ್, ಅಂಜುಮ್ ಭಾನು ಆರನೇ ರಾ ‍್ಯಂಕ್, ಬಿ.ಕಾಂ ವಿಭಾಗದಿಂದ ಡಿ. ಎಂ. ಹರ್ಷಿತ ಏಳನೇ ರ್‍ಯಾಂಕ್ ಮತ್ತು ಬಿ.ಸಿ.ಎ. ವಿಭಾಗದಿಂದ ಪಿ. ಅಶ್ವಿನಿ ಹತ್ತನೇ ರ್‍ಯಾಂಕ್ ಗಳಿಸಿದ್ದಾರೆ.

## ಕ್ರೀಡಾ ಕ್ಷೇತ್ರದಲ್ಲಿ ಅನನ್ಯ ಸಾಧನೆ



ದಾವಣಗೆರೆ, ಡಿ.27 - ನಗರದ ಮಾಜಿ ಬಿಎಸ್‌ಎಫ್ ಯೋಧ ಮಹಮ್ಮದ್ ರಫೀ ಅವರು 2023 ರಲ್ಲಿ 2 ರಾಜ್ಯ ಮಟ್ಟದ ಓಟದ ಸ್ಪರ್ಧೆಗಳಲ್ಲಿ 3 ಬೆಳ್ಳಿ ಪದಕ, 3 ಕಂಚಿನ ಪದಕ ಪಡೆದಿದ್ದು, ರಾಷ್ಟ್ರಮಟ್ಟದ ಓಟ ಸ್ಪರ್ಧೆಗಳಲ್ಲಿ 3 ಚಿನ್ನದ ಪದಕ, 4 ಬೆಳ್ಳಿ ಪದಕ, 4 ಕಂಚಿನ ಪದಕ ಪಡೆದಿದ್ದಾರೆ. ದಸರಾ ಕ್ರೀಡಾ ಸ್ಪರ್ಧೆಯಲ್ಲಿ 1 ಚಿನ್ನದ ಪದಕ, 2 ಕಂಚಿನ ಪದಕ ಹಾಗೂ ವಿವಿಧ ಮ್ಯಾರಥಾನ್ ಓಟ ಸ್ಪರ್ಧೆಗಳಲ್ಲಿ 6 ಪದಕಗಳೊಂದಿಗೆ 2023 ರಲ್ಲಿ ಒಟ್ಟು 26 ಪದಕಗಳನ್ನು ಪಡೆದಿದ್ದು, ಬರುವ ಜನವರಿ 21 ರಂದು ನಡೆಯಲಿರುವ ಏಷ್ಯಾದ ನಂ. 1 ಟಿಎಟಿಎ ಮುಂಬಯಿ ಮ್ಯಾರಥಾನ್‌ನಲ್ಲಿ 42.195 ಕಿ.ಮೀ. ಓಟದ ಸ್ಪರ್ಧೆಗೆ ಭಾಗವಹಿಸಲಿದ್ದಾರೆ.

## ಸಿರಿಗೆರೆಯಲ್ಲಿ ಇಂದು 'ಕೃಷ್ಣೇಗೌಡರ ಆನೆ' ನೀಳ್ಗತೆಯ ಸಂವಾದ ಕಾರ್ಯಕ್ರಮ

ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಇಂದು ಸಂಜೆ 6 ಗಂಟೆಗೆ ದ್ವಿತೀಯ ಪಿಯುಸಿ ಕನ್ನಡ ಭಾಷಾವಿಷಯದ ಪಠ್ಯ ಕೃಷ್ಣೇಗೌಡರ ಆನೆ ನೀಳ್ಗತೆಯ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಮರ್ಶಕ, ಅಂಕಣಕಾರ ಹೆಚ್.ಎಸ್. ಸತ್ಯನಾರಾಯಣ ಪಠ್ಯವನ್ನು ಕುರಿತು ಹಾಗೂ ರಂಗ ಕರ್ಮಿ ಶಶಿಕಾಂತ ಯಡಹಳ್ಳಿ ನಾಟಕ ಕುರಿತು ಉಪನ್ಯಾಸ ನೀಡಲಿದ್ದಾರೆ. ಪ್ರಾಂಶುಪಾಲರುಗಳಾದ ಶಿವನಗೌಡ ಕೆ.ಸುರಕೋಡ, ಜಿ.ಸಿ. ಪ್ರವೀಣ್ ಕುಮಾರ್ ಉಪಸ್ಥಿತರಿರಲಿದ್ದಾರೆ.










## ಅಯೋಧ್ಯೆ ರಾಮ ಮಂದಿರದಲ್ಲಿ ನೀರು ಶುದ್ಧೀಕರಣ ಘಟಕ

ಅಯೋಧ್ಯೆ, ಡಿ. 27 – ಅಯೋಧ್ಯೆಯ ರಾಮ ಮಂದಿರದ ಎರಡು ಕೊಳಚೆ ನೀರು ಶುದ್ಧೀಕರಣ ಘಟಕ ಹಾಗೂ ಒಂದು ನೀರು ಶುದ್ಧಿಕರಣ ಘಟಕ ಹೊಂದಿರಲಿದೆ ಎಂದು ಅಯೋಧ್ಯೆಯ ರಾಮ ಮಂದಿರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ತಿಳಿಸಿದ್ದಾರೆ.

ದೇವಾಲಯದಲ್ಲಿ ಅಗ್ನಿಶಾಮಕ ಠಾಣೆ ಸಹ ಇರಲಿದೆ. ಅಂತರ್ಜಲ ಸಂಗ್ರಹಗಾರದಿಂದ ಈ ಠಾಣೆಗೆ ನೀರು ಪೂರೈಸಲಾಗುವುದು. ಒಂದು ರೀತಿಯಲ್ಲಿ ದೇವಾಲಯ 'ಆತ್ಮನಿರ್ಭರ'ವಾಗಲಿದೆ ಎಂದವರು ಹೇಳಿದ್ದಾರೆ.

ಅಯೋಧ್ಯೆ ಮಂದಿರ 70 ಎಕರೆ ಜಾಗ ಹೊಂದಿದೆ. ಇದರಲ್ಲಿ ಶೇ.70ರಷ್ಟು ಜಾಗ ಹಸಿರು ಪ್ರದೇಶವಾಗಿರಲಿದೆ ಎಂದವರು ತಿಳಿಸಿದ್ದಾರೆ. ದೇವಾಲಯ ಪ್ರವೇಶದಲ್ಲಿ ಲಿಫ್ಟ್ ಹಾಗೂ ಎರಡು ರ್‍ಯಾಂಪ್ ಸೌಲಭ್ಯ ಇರಲಿದೆ. ಇದು ಹಿರಿಯರು, ವಿಶೇಷ ಚೇತನರಿಗೆ ನೆರವಾಗಲಿದೆ. ಅಯೋಧ್ಯೆಯ ಕುಬೇರ ತಿಲದಲ್ಲಿ ಜಟಾಯು ಪ್ರತಿಮೆ ಸ್ಥಾಪಿಸಲಾಗುವುದು ಎಂದು ಚಂಪತ್ ರಾಯ್ ತಿಳಿಸಿದ್ದಾರೆ.

## ಜಗಳೂರು ತಾಲ್ಲೂಕಿನಲ್ಲಿ ಅಪರಿಚಿತನ ಶವ ಪತ್ತೆ

ಜಗಳೂರು, ಡಿ. 27 - ತಾಲ್ಲೂಕಿನ ಕುಳ್ಳೋಬನಹಳ್ಳಿ ಗ್ರಾಮದ ರಿ.ಸ.ನಂ. 24ರ ಜಮೀನಿನಲ್ಲಿ ಸುಮಾರು 50-60 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಮೃತ ದೇಹ ಪತ್ತೆಯಾಗಿದ್ದು, ವಾರಸುದಾರರ ಪತ್ತೆಗೆ ಜಗಳೂರು ಪೊಲೀಸ್ ಠಾಣೆ ಮನವಿ ಮಾಡಿದ್ದಾರೆ.

ದೇಹವನ್ನು ಕಾಡು ಪ್ರಾಣಿಗಳು ತಿಂದಿದ್ದು, ಕೇವಲ ಮೂಳೆಗಳು ಮಾತ್ರ ಇರುತ್ತವೆ. ಮೈ ಮೇಲೆ ನೀಲಿ ಲಾಡಿ ಚಡ್ಡಿ, ಕಂದು ಬಣ್ಣದ ತುಂಬು ತೋಳಿನ ಅಂಗಿ, ಬಿಳಿ ಬಣ್ಣದ ಪಂಚೆ, ಕಪ್ಪು ಬಣ್ಣದ ಚುಕ್ಕಿಯ ಟವೆಲ್, ಬಿಳಿ ಬಾರಿನ ಕಪ್ಪು ಹವಾಯ್ ಚಪ್ಪಲಿ, ಫೈಬರ್ ವಾಚ್, ಫೋಟೋ ಹಾಗೂ ಕಪ್ಪು ಮತ್ತು ಕೆಂಪು ಬಣ್ಣದ ಉಡುದಾರಗಳು ಇರುತ್ತವೆ.

# ರಾಮಮಂದಿರ ಉದ್ಘಾಟನೆಯ ಆಹ್ವಾನದ ಅಕ್ಷತೆಯನ್ನು ಮನೆಮನೆಗೂ ತಲುಪಿಸಬೇಕು

ಹರಪನಹಳ್ಳಿ, ಡಿ. 27 - ರಾಮಮಂದಿರ ಉದ್ಘಾಟನೆಯ ಆಹ್ವಾನ ಅಕ್ಷತೆ ಕೊಡುವ ಮೂಲಕ ತಾಲ್ಲೂಕಿನ ಪ್ರತಿ ಮನೆ ಮನೆಗೂ ತಲುಪಿಸಬೇಕು ಎಂದು ಆರ್‌ಎಸ್‌ಎಸ್‌ನ ಗ್ರಾಮ ವಿಕಾಸ ಪ್ರಾಂತ ಸಂಯೋಜಕ ಪ್ರಚಾರಕ ಜಿ.ರಾಜಶೇಖರ್ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ನಿನ್ನೆ ಆಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾನ ಸಂಬಂಧ ಅಯೋಧ್ಯೆಯಿಂದ ಬಂದ ಅಕ್ಷತ ಕಳಸ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸೋಮವಾರ ಮಾತನಾಡಿದರು.

ಜನವರಿ 22ಕ್ಕೆ ಆಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯಾಗುತ್ತಿರುವ ಸಿರಿಸಂಭ್ರಮ ದೇಶವ್ಯಾಪಿಯಾಗಬೇಕು. ಆ ನಿಟ್ಟಿನಲ್ಲಿ ಆಯೋಧ್ಯೆಯಿಂದ ಬಂದಿರುವ ಸಾವಯವ ಅಕ್ಕಿ, ದೇಶಿಯ ತುಪ್ಪ, ಅರಿಸಿಣ ಹಾಕಿ ತಯಾರಿಸಿದ ಅಕ್ಷತೆ ಕಾಳುಗಳನ್ನು ಪ್ರತಿ ಮನೆ ಮನೆಗೂ ತಲುಪಬೇಕಾಗಿದೆ ಎಂದರು.

500ವರ್ಷಗಳ ಹೋರಾಟದ ಸಾಫಲ್ಯತೆ ಅಂದು ಸಿಗುತ್ತದೆ. ಈ ದೇಶದ ಜನರ ಶ್ರದ್ಧೆಯ ಬಿಂದು ಶ್ರೀರಾಮವಾಗಿದ್ದು, ಈ ಕಾರ್ಯಕ್ರಮ ಕೇವಲ ಶ್ರೀರಾಮನಮೂರ್ತಿ ಪ್ರತಿಷ್ಠಾಪನೆ ಅಲ್ಲ, ದೇಶದ ಸ್ವಾಭಿಮಾನ ನಿರ್ಮಾಣ ಕಾರ್ಯಕ್ರಮ ಎಂದು ಹೇಳಿದರು.

ಅಂದು ಜ.22ರಂದು 12.16 ನಿಮಿಷಕ್ಕೆ ಆಯಾ ಗ್ರಾಮಗಳಲ್ಲಿನ ದೇವಸ್ಥಾನಗಳಲ್ಲಿ ಪೂಜೆ, ಪುನಸ್ಕಾರ ಕೈಗೊಳ್ಳಬೇಕು. ಪ್ರತಿಯೊಬ್ಬರು ರಾಮ ಮಂದಿರ ಉದ್ಘಾಟನೆಯ ಕಾರ್ಯಕ್ರಮವನ್ನು ದೃಶ್ಯ ಮಾಧ್ಯಮಗಳಲ್ಲಿ ವೀಕ್ಷಣೆ ಮಾಡಬೇಕು ಎಂದು ತಿಳಿಸಿದರು.



ಹರಪನಹಳ್ಳಿ

ಇದಕ್ಕೂ ಪೂರ್ವದಲ್ಲಿ ಹಳೇಬಸ್ ನಿಲ್ದಾಣದಲ್ಲಿನ ಸಾರಿಬಯಲು ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಅಯೋಧ್ಯೆಯಿಂದ ಬಂದಿರುವ ಅಕ್ಷತೆ ಕಾಳುಗಳುಳ್ಳ ಚೀಲಗಳನ್ನು ಮೆರವಣಿಗೆ ಮೂಲಕ ಹೊಸಪೇಟೆ ರಸ್ತೆಯ ಮಾರ್ಗವಾಗಿ ತರಳಬಾಳು ಕಲ್ಯಾಣ ಮಂಟಪಕ್ಕೆ ತರಲಾಯಿತು.

ಈ ಸಂದರ್ಭದಲ್ಲಿ ಸಂಯೋಜಕ ಜಿ. ಪಶುಪತಿ, ತಾಲ್ಲೂಕು ವಿಶ್ವಹಿಂದೂ ಪರಿಷತ್ ಅಧ್ಯಕ್ಷ ಹೆಚ್.ಎಂ.ಜಗದೀಶ್, ಬಿಜೆಪಿ ಮುಖಂಡರಾದ ಜಿ.ನಂಜನಗೌಡ, ಆರುಂಡಿ ನಾಗರಾಜ, ಎಚ್.ಎಂ.ಅಶೋಕ, ಸುವರ್ಣ ಆರುಂಡಿ, ಕುಸುಮಾ ಜಗದೀಶ್, ಹರಾಳ ಪ್ರಭ ಅಶೋಕ, ಮುದುಕ್ಕವ್ವನವರ ಶಂಕರ, ಚಂದ್ರಶೇಖರ ಪೂಜಾರ, ಆರ್‌ಎಸ್‌ಎಸ್‌ಮುಖಂಡ ಸತ್ಯನಾರಾಯಣ, ಬಿ.ವೈ. ವೆಂಕಟೇಶನಾಯ್ಕ, ನಾಗರಾಜ, ಮನೋಜ ತಳವಾರ, ಶಿವಾನಂದ ದಾದಾಪುರ, ಕಡತಿ ರಮೇಶ್, ಸೇರಿದಂತೆ ಇತರರು ಇದ್ದರು.

## ನಾಳೆ ತರಳಬಾಳು ಕ್ರೀಡಾಮೇಳ

ಸಿರಿಗೆರೆ, ಡಿ.27- ಇಲ್ಲಿನ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯಿಂದ ನಾಡಿದ್ದು ದಿನಾಂಕ 29ರಿಂದ 31ರವರೆಗೆ ಸಿರಿಗೆರೆಯಲ್ಲಿ ತರಳಬಾಳು ಕ್ರೀಡಾಮೇಳವನ್ನು ಹಮ್ಮಿಕೊಳ್ಳಲಾಗಿದೆ.

ನಾಡಿದ್ದು ದಿನಾಂಕ 29ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ಕ್ರೀಡಾಮೇಳವನ್ನು ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಬಿ. ನಾಗೇಂದ್ರ ಉದ್ಘಾಟಿಸಲಿದ್ದಾರೆ.

ಮಾಜಿ ಸಭಾಪತಿ ಡಿ.ಹೆಚ್. ಶಂಕರಮೂರ್ತಿ, ಏಷಿಯನ್ ಗೇಮ್ಸ್ ಪದಕ ವಿಜೇತೆ ಕು.ನಂದಿನಿ ಅಗಸರ, ಪ್ಯಾರಾ ಅಥ್ಲೀಟ್ ಕು.ರಕ್ಷಿತಾ ರಾಜು, ದಾವಣಗೆರೆ ಎಸ್ಪಿ ಉಮಾ ಪ್ರಶಾಂತ್, ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ.ಹೆಚ್.ವಿ. ವಾಮದೇವಪ್ಪ, ವಿಶೇಷಾಧಿಕಾರಿ ವೀರಣ್ಣ ಎಸ್.ಜತ್ತಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಸಂಜೆ 6 ಗಂಟೆಗೆ ಸಾಂಸ್ಕೃತಿಕ ಸಮಾರಂಭ ನಡೆಯಲಿದ್ದು, ಹುಬ್ಬಳ್ಳಿ ಶ್ರೀ ಆರೂಢ ಜ್ಯೋತಿ ಶಾಂತಾಶ್ರಮದ ಶ್ರೀ ಅಭಿನವ ಸಿದ್ಧಾರೂಢ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಿವಿಲ್ ನ್ಯಾಯಾಧೀಶರಾದ ವಿನುತ ಬಿ.ಎಸ್., ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ್ತಿ ಗೀತಾ ಗೌಡ, ರಂಗ ಕರ್ಮಿ ಶಶಿಕಾಂತ ಯಡಹಳ್ಳಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕರಿಸಿದ್ದಪ್ಪ ಎಸ್.ಜಿ. ಬಿಜೆಪಿ ಯುವ ಮುಖಂಡ ರಘು ಚಂದನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇದೇ ವೇಳೆ ಕೃಷ್ಣೇಗೌಡರ ಆನೆ ನಾಟಕ ಪ್ರದರ್ಶನ ನಡೆಯಲಿದೆ.

ದಿನಾಂಕ 30ರಂದು ಸಂಜೆ 6 ಗಂಟೆಗೆ ನಡೆಯುವ ಸಾಂಸ್ಕೃತಿಕ ಸಮಾರಂಭದ ಸಾನ್ನಿಧ್ಯವನ್ನು ಹಾವೇರಿ ಹುಕ್ಕೇರಿ ಮಠಾಧ್ಯಕ್ಷ ಶ್ರೀ ಸದಾಶಿವ ಮಹಾಸ್ವಾಮೀಜಿ ವಹಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ, ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಇತರರು ಭಾಗವಹಿಸಲಿದ್ದಾರೆ. ನಂತರ ಮಾತನಾಡುವ ಗೊಂಬೆ, ನೆರಳು ಬೆಳಕಿನಾಟ ಮತ್ತು ಮ್ಯಾಜಿಕ್ ಶೋ ಕಾರ್ಯಕ್ರಮಗಳು ನಡೆಯಲಿವೆ

ದಿನಾಂಕ 31ರಂದು ಸಂಜೆ 6ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಭಾಗವಹಿಸಲಿದ್ದು, ಧಾರವಾಡ ಮುರುಘಾ ಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

## ವಸತಿ ಹೆಸರಿನಲ್ಲಿ ಜೆ.ಎನ್.ಯು. ಉಪನ್ಯಾಸಕರಿಗೆ 11 ಕೋಟಿ ರೂ. ವಂಚನೆ

ನವದೆಹಲಿ, ಡಿ. 27 – ಕಡಿಮೆ ದರದಲ್ಲಿ ವಸತಿ ಯೋಜನೆ ಜಾರಿಗೆ ತರುವುದಾಗಿ ಹೇಳಿ ಜವಾಹರಲಾಲ್ ದೆಹಲಿ ವಿಶ್ವವಿದ್ಯಾಲಯ (ಜೆ.ಎನ್.ಯು.) ಹಾಗೂ ದೆಹಲಿ ಐ.ಐ.ಟಿ. ಉಪನ್ಯಾಸಕರಿಗೆ 11 ಕೋಟಿ ರೂ.ಗಳ ವಂಚನೆ ಮಾಡಿದ 63 ವರ್ಷದ ಮಾಜಿ ಜೆ.ಎನ್.ಯು. ಉದ್ಯೋಗಿಯನ್ನು ಬಂಧಿಸಲಾಗಿದೆ.

ಡಿ.ಡಿ.ಎ.ದ ಜಮೀನು ಸಂಗ್ರಹ ನೀತಿಯ ಅನ್ವಯ ವಸತಿ ಕಲ್ಪಿಸುವುದಾಗಿ ಪಿ.ಡಿ. ಗಾಯಕ್ವಾಡ್ ಎಂಬಾತ ವಂಚನೆ ಮಾಡಿದ್ದ. ಈತನ ವಿರುದ್ಧ ಉಪನ್ಯಾಸಕರು ದೂರು ದಾಖಲಿಸಿದ್ದರು.

2015ರಲ್ಲಿ ವಿಶ್ವವಿದ್ಯಾಲಯದ ಪರಿಸರ ವಿಜ್ಞಾನಗಳ ಶಾಲೆಯಲ್ಲಿ ವೈಜ್ಞಾನಿಕ ಅಧಿಕಾರಿಯಾಗಿದ್ದ ಗಾಯಕ್ವಾಡ್, ನೋಬಲ್ ಸೋಷಿಯೋ - ಸೈಂಟಿಫಿಕ್ ವೆಲ್‌ಫೇರ್ ಎಂಬ ಸಂಘಟನೆಯನ್ನು ಆರಂಭಿಸಿದ್ದ. ಈ ಸಂಘಟನೆಯ ಮೂಲಕ ಕೈಗೆಟಕುವ ದರದಲ್ಲಿ ವಸತಿ ಕಲ್ಪಿಸುವುದಾಗಿ ಹೇಳಿದ್ದ.

ನಂತರ ವಿಶ್ವವಿದ್ಯಾಲಯ ಹಾಗೂ ಐ.ಐ.ಟಿ. ಉಪನ್ಯಾಸಕರು ಈ ಸಂಘಟನೆಗೆ ಸಂಪರ್ಕಿತರಾಗಿದ್ದರು. ವಸತಿಗಾಗಿ ಇವರು ಸದಸ್ಯ ಶುಲ್ಕ ಹಾಗೂ ಇತರೆ ಹಣ ಪಾವತಿಸಿದ್ದರು. ಆದರೆ, ವರ್ಷಗಳಾದರೂ ಆತ ಜಮೀನು ಖರೀದಿ ಇಲ್ಲವೇ ಫ್ಲಾಟ್ ಒದಗಿಸುವ ಯಾವುದೇ ದಾಖಲೆ ಒದಗಿಸಲಿಲ್ಲ. ವರ್ಷಗಳ ನಂತರ ವಂಚನೆಯ ಬಗ್ಗೆ ಅರಿವಾಯಿತು. 2019ರಿಂದಲೂ ಹಣ ವಾಪಸ್ ನೀಡುವಂತೆ ಉಪನ್ಯಾಸಕರು ಒತ್ತಾಯಿಸುತ್ತಿದ್ದರು. ನಂತರವೂ ಹಣ ಮರಳಿಸದ ಗಾಯಗ್ವಾಡ್ ವಿರುದ್ಧ ಉಪನ್ಯಾಸಕರು ದೂರು ದಾಖಲಿಸಿದ್ದಾರೆ.

## ಗುಜರಾತ್ : ವೀಸಾಗಾಗಿ ನಕಲಿ ಬ್ಯಾಂಕ್ ದಾಖಲೆ ಸೃಷ್ಟಿಸುತ್ತಿದ್ದವರ ಬಂಧನ

ಅಹಮದಾಬಾದ್, ಡಿ. 27 – ಗುಜರಾತ್‌ನ ರಾಜಧಾನಿ ಗಾಂಧಿನಗರದಲ್ಲಿ ವಲಸೆ ಸಲಹಾ ಸಂಸ್ಥೆ ನಡೆಸುತ್ತಿದ್ದ ಮೂವರು ವೀಸಾಗಾಗಿ ನಕಲಿ ಬ್ಯಾಂಕ್ ದಾಖಲೆ ಸೃಷ್ಟಿಸುತ್ತಿದ್ದರು ಎಂದು ಆರೋಪಿಸಲಾಗಿದೆ. ಈ ಮೂವರನ್ನು ಸಿ.ಐ.ಡಿ. ಬಂಧಿಸಿದೆ.

ಈ ಮೂವರು ತಮ್ಮ ಗ್ರಾಹಕರಿಗೆ ನಕಲಿ ಬ್ಯಾಂಕ್ ಖಾತೆ ವಿವರಗಳನ್ನು ಸೃಷ್ಟಿಸುತ್ತಿದ್ದರು. ನಕಲಿ ದಾಖಲೆಗಳನ್ನು ಒದಗಿಸಿ ತ್ವರಿತವಾಗಿ ವೀಸಾ ಪಡೆಯುವಂತೆ ಮಾಡುತ್ತಿದ್ದರು ಎಂದು ಆರೋಪಿಸಲಾಗಿದೆ.

ಅಮೆರಿಕ ಹಾಗೂ ಕೆನಡಾಗಳಂತಹ ದೇಶಗಳಲ್ಲಿ ಕೆಲಸದ ಅನುಮತಿ ಪಡೆಯಲು ನಕಲಿ ದಾಖಲೆಗಳನ್ನು ಸೃಷ್ಟಿಸಲಾಗುತ್ತಿದೆ ಎಂಬ ದೂರು ಬಂದ ಹಿನ್ನೆಲೆಯಲ್ಲಿ ಸಿ.ಐ.ಡಿ. ಈ ಕ್ರಮ ತೆಗೆದುಕೊಂಡಿದೆ.

ಈ ಬಗ್ಗೆ ರಾಜ್ಯದ 17 ಕಡೆಗಳಲ್ಲಿ ಕಳೆದ ಡಿಸೆಂಬರ್ 15ರಂದು ದಾಳಿ ನಡೆಸಲಾಗಿತ್ತು. ಫ್ಯೂಚರ್ ಪ್ಲಾನಿಂಗ್ ವೀಸಾ ಕನ್ಸಲ್ಟೆನ್ಸಿ ಎಂಬ ಸಂಸ್ಥೆಯಲ್ಲಿ ಶಂಕಾಸ್ಪದ ದಾಖಲೆಗಳು ಕಂಡು ಬಂದಿದ್ದವು. ಇವುಗಳು ನಕಲಿ ಎಂಬುದು ವಿಧಿ ವಿಜ್ಞಾನ ಪರೀಕ್ಷೆಯಲ್ಲಿ ಕಂಡು ಬಂದಿದೆ.

ನಂತರ ಅವಕಾಶ್ ಚೌಧರಿ, ಸಾಹಿಲ್ ಪಟೇಲ್ ಹಾಗೂ ಕ್ರುನಾಲ್ ವರಿಯಾ ಎಂಬುವವರನ್ನು ಬಂಧಿಸಲಾಗಿದೆ.

ಇತ್ತೀಚೆಗಷ್ಟೇ ಮಾನವ ಕಳ್ಳಸಾಗಣೆ ಶಂಕೆಯ ಮೇಲೆ ಫ್ರಾನ್ಸ್‌ನಿಂದ ವಿಮಾನವೊಂದನ್ನು ವಾಪಸ್ ಕಳಿಸಲಾಗಿತ್ತು. ಇದರಲ್ಲಿ 276 ಪ್ರಯಾಣಿಕರಿದ್ದು, ಇವರಲ್ಲಿ ಬಹುತೇಕರು ಗುಜರಾತ್‌ನವರಾಗಿದ್ದರು.

# ಜಿಲ್ಲೆಯಲ್ಲಿ 249 ಅಪ್ರಾಪ್ತ ಹೆರಿಗೆ ಪ್ರಕರಣ

(1ನೇ ಪುಟದಿಂದ) ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಬಾಲ್ಯ ವಿವಾಹ ತಡೆಯುವ ಸಮನ್ವಯ ಸಮಿತಿಯ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿದೆ.

ಈ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಅಪ್ರಾಪ್ತರು ಹೆರಿಗೆಗೆ ದಾಖಲಾಗಿದ್ದಾರೆ ಎಂಬ ಮಾಹಿತಿ ಗಮನಕ್ಕೆ ಬಂದ ತಕ್ಷಣ ವೈದ್ಯರು ಎಂ.ಎಲ್.ಸಿ. (ವೈದ್ಯಕೀಯ ಕಾನೂನು ಪ್ರಕರಣ) ದಾಖಲಿಸಬೇಕು. ಇಂತಹ ಪ್ರಕರಣಗಳ ಬಗ್ಗೆ ವರದಿ ದಾಖಲಿಸದೇ ಇದ್ದರೆ ವೈದ್ಯರ ಮೇಲೆಯೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಅಪಘಾತ ಪ್ರಕರಣಗಳಲ್ಲಿ ವೈದ್ಯರು ಕಡ್ಡಾಯವಾಗಿ ಎಂ.ಎಲ್.ಸಿ. ದಾಖಲಿಸುತ್ತಾರೆ. ಅದೇ ರೀತಿ ಅಪ್ರಾಪ್ತರ ಹೆರಿಗೆ ವಿಷಯದಲ್ಲೂ ಕ್ರಮ ವಹಿಸಬೇಕು. ಇಲ್ಲವಾದರೆ ಆರೋಗ್ಯ ಇಲಾಖೆಯ ವಿರುದ್ಧವೇ 249 ಎಫ್.ಐ.ಆರ್. ದಾಖಲಿಸುವ ಪರಿಸ್ಥಿತಿ ಬರುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣನವರ್ ಎಚ್ಚರಿಸಿದರು.

### ಪುರೋಹಿತರ ವಿರುದ್ಧವೂ ಕ್ರಮ

ಮದುವೆಯ ನೋಂದಣಿ ಮಾಡಿಸುವಾಗ ಅವರು ಪ್ರಾಪ್ತ ವಯಸ್ಸಿನವರೇ ಎಂಬುದನ್ನು ಪರಿಶೀಲಿಸಲಾಗುತ್ತದೆ. ಅದೇ ರೀತಿ ಪುರೋಹಿತರು, ಕಲ್ಯಾಣ ಮಂಟಪದವರು, ಮತ್ತಿತರರು ಪರಿಶೀಲಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು. ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ ಕುಟುಂಬದವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಜೊತೆಗೆ, ಮದುವೆ ಮಾಡಿಸುವ ಪುರೋಹಿತರು ಮತ್ತಿತರರ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಇಂತಹ ಪ್ರಕರಣಗಳ ಬಗ್ಗೆ ವಹಿಸಬೇಕಾದ ಕ್ರಮಗಳ ಕುರಿತು ವೈದ್ಯರಿಗೆ ತರಬೇತಿ ಕೊಡಲಾಗುತ್ತಿದೆ ಎಂದರು. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರು ಸ್ಥಳೀಯ ಮಟ್ಟದಲ್ಲಿ ಸರ್ಕಾರದ ಕಣ್ಣು - ಕಿವಿ ಇದ್ದಂತೆ. ಅವರು ಅಪ್ರಾಪ್ತರ ಮದುವೆ ತಡೆಯುವಲ್ಲಿ ಹೆಚ್ಚಿನ ಗಮನ ಹರಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟೇಶ್ ಹೇಳಿದರು.

**ಆಧಾರ್‌ನಲ್ಲಿ ಮಾತ್ರ ಅಪ್ರಾಪ್ತರು :** ಅಪ್ರಾಪ್ತ ತಾಯಂದಿರ 249 ಪ್ರಕರಣಗಳು ಜಿಲ್ಲೆಯಲ್ಲಿ ಹೆರಿಗೆಯ ಸಂದರ್ಭದಲ್ಲಿ ವರದಿಯಾಗಿವೆ. ಈ ಬಗ್ಗೆ ಪರಿಶೀಲಿಸಿದಾಗ 36 ಪ್ರಕರಣಗಳಲ್ಲಿ ತಾಯಂದಿರು ಪ್ರಾಪ್ತ ವಯಸ್ಸಿನವರು ಎಂಬುದು ಕಂಡು ಬಂದಿದೆ. ಆಧಾರ್‌ನಲ್ಲಿ ಇವರ ವಯಸ್ಸನ್ನು ಕಡಿಮೆ ನಮೂದಿಸಲಾಗಿತ್ತು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಅಪ್ರಾಪ್ತರು ಮದುವೆಯಾದ ಸಂದರ್ಭದಲ್ಲಿ ಅದನ್ನು ಮುಚ್ಚಿಡಲು ತಾಳಿ ಹಾಗೂ ಕಾಲುಂಗುರವನ್ನೇ ಧರಿಸದ ಪ್ರಕರಣಗಳೂ ಗಮನಕ್ಕೆ ಬಂದಿವೆ. ಒಂದು ವೇಳೆ ಅಪ್ರಾಪ್ತರು ಗರ್ಭಿಣಿಯಾಗಿರುವುದು ಗಮನಕ್ಕೆ ಬಂದಾಗ ಅವರಿಗೆ ಚಿಕಿತ್ಸೆ ಇಲ್ಲವೇ ಸರ್ಕಾರಿ ಸೌಲಭ್ಯಗಳನ್ನು ನಿರಾಕರಿಸುವಂತಿಲ್ಲ. ಅವರಿಗೆ ಸೌಲಭ್ಯಗಳನ್ನು ನೀಡುತ್ತಲೇ ಪ್ರಕರಣವನ್ನೂ ದಾಖಲಿಸಬೇಕಾಗುತ್ತದೆ ಎಂದವರು ವಿವರಿಸಿದ್ದಾರೆ.

## ನಗರದಲ್ಲಿ ಇಂದು ಡಿಎಸ್‌ಎಸ್ ಜಾಗೃತಿ ಸಮಾವೇಶ

ದಾವಣಗೆರೆ, ಡಿ. 27- ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ನಾಳೆ ದಿನಾಂಕ 28 ರ ಗುರುವಾರ ಮಧ್ಯಾಹ್ನ 12 ಗಂಟೆಗೆ ನಗರದ ಮಹಾನಗರ ಪಾಲಿಕೆಯ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಸಂವಿಧಾನ ಸಮರ್ಪಣಾ ದಿನದ ಪ್ರಯುಕ್ತ ದಲಿತ, ಶೋಷಿತರ ಹಕ್ಕುಗಳಿಗಾಗಿ ಒತ್ತಾಯಿಸಿ, ಜಿಲ್ಲಾ ಮಟ್ಟದ ಜಾಗೃತಿ ಸಮಾವೇಶವನ್ನು ನಡೆಸಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ದುಗ್ಗಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 11 ಕ್ಕೆ ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ಮೆರವಣಿಗೆ ಮೂಲಕ ಪಾಲಿಕೆ ಆವರಣದಲ್ಲಿನ ರಂಗಮಂದಿರದಲ್ಲಿ ನಡೆಯುವ ಸಮಾವೇಶದ ಸ್ಥಳಕ್ಕೆ ಆಗಮಿಸಲಾಗುವುದು ಎಂದು ಮಾಹಿತಿ ನೀಡಿದರು.

ಯುವ ಕಾಂಗ್ರೆಸ್ ಮುಖಂಡ ಜಿ.ಬಿ. ವಿನಯ್ ಕುಮಾರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಚಿಂತಕ ಡಾ. ಎ.ಬಿ. ರಾಮಚಂದ್ರಪ್ಪ ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದು, ಮಾಜಿ ಸಚಿವ ಹೆಚ್. ಆಂಜನೇಯ ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಉಪ ಪ್ರಧಾನ ಸಂಚಾಲಕ ನಾಗಣ್ಣ ಬಡಿಗೇರ್, ಮಹಿಳಾ ಸಂಚಾಲಕಿ ನಿರ್ಮಲ, ಸದಸ್ಯ ರಮೇಶ್ ಡಾಕುಳಗಿ, ಉಪ ಪ್ರಧಾನ ಸಂಚಾಲಕ ಮಣಿಪಾಲ್ ರಾಜಪ್ಪ, ಕಟ್ಟಡ ಕಾರ್ಮಿಕರ ಸಂಘಟನೆ ರಾಜ್ಯಾಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ, ವಕೀಲ ಅನೀಸ್ ಪಾಷ ಮತ್ತಿತರರು ಭಾಗವಹಿಸಲಿದ್ದಾರೆ. ಕದಸಂಸ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಗಣೇಶ್ ನಿಟುವಳ್ಳಿ, ಬಿ. ಹನುಮಂತಪ್ಪ, ಲಿಂಗರಾಜ್, ತಿಪ್ಪೇಶ್ ಬಸಾಪುರ, ಗಣೇಶ್ ಮತ್ತಿತರರಿದ್ದರು.

## ನಗರದಲ್ಲಿ ಇಂದು ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತನ್ನ ಭವ್ಯ ಇತಿಹಾಸದ 138 ವರ್ಷಗಳನ್ನು ಡಿಸೆಂಬರ್ 28ರಂದು ಪೂರ್ಣಗೊಳಿಸುತ್ತಿದ್ದು, 139ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 8-30ಕ್ಕೆ ಎಸ್ಸೆಸ್ - ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಧ್ವಜಾರೋಹಣ ನೆರವೇರಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.


**ಟಾಟಾ ಏಸ್ ಬಾಡಿಗೆಗಿದೆ**
ಟಾಟಾ ಏಸ್ ವಾಹನ ಡ್ರೈವರ್ (ಬಿಟ್ಟು) ರಹಿತವಾಗಿ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಬಾಡಿಗೆಗೆ ದೊರೆಯುತ್ತದೆ.
ಮೊ. 97385-23711

**ಮನೆಗಳು ಮಾರಾಟಕ್ಕಿವೆ**
ಎಂಸಿಸಿ ಬಿ ಬ್ಲಾಕ್ ಪೂರ್ವ 44x60 ಡುಪ್ಲೆಕ್ಸ್ (ಹೈಫೈ ಹೌಸ್) 22x60, ಪಶ್ಚಿಮ 22x60, ಸಿದ್ದವೀರಪ್ಪ ಬಡಾವಣೆ, ಪೂರ್ವ 30x40 ಡುಪ್ಲೆಕ್ಸ್, ಎಸ್.ಎಸ್. ಬಿ ಬ್ಲಾಕ್, ದಕ್ಷಿಣ 30x40.
ಐಗೂರು ವಿಜಯಕುಮಾರ್
99457 02495

**ಸೈಟುಗಳ ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x56, 40x60, 30x55, ಪಶ್ಚಿಮ 30x40, 30x55, ಎಸ್.ಎಸ್. 'ಬಿ' ಬ್ಲಾಕ್ ಉತ್ತರ 40x60, ಡಾಲರ್ಸ್ ಕಾಲೋನಿ ಉತ್ತರ 40x60.
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತವಾದ 2 BHK ಮನೆ. ವಿದ್ಯಾನಗರ, ನೂತನ ಕಾಲೇಜು ರಸ್ತೆ, ಕಾಮದೇನು ಹೋಟೆಲ್ ಹತ್ತಿರ.
ಮೊ : 97400 01129

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು, ಹುಡುಗರು, ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 40x60 ಪಶ್ಚಿಮ (64 ಲಕ್ಷ) 40x60 ದಕ್ಷಿಣ (63.5 ಲಕ್ಷ) 40 ಅಡಿ ರಸ್ತೆಗೆ
ಕಿರಣ್ ಭೂಸ್ನೂರ್ (ಏಜೆಂಟ್)
98440 63409, 97315 63409

**ಸೈಟು ಮಾರಾಟಕ್ಕಿವೆ**
ಹೊಸ ಬಸ್ ಸ್ಟ್ಯಾಂಡ್ ಹಿಂಭಾಗ ಗಣೇಶ ಲೇಔಟ್‌ನಲ್ಲಿ 30x48 North ನೇರ ಪಾರ್ಟಿಯಿಂದ ವ್ಯಾಪಾರ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗ-ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ : 91138 57837

**ಸೈಟುಗಳ ಮಾರಾಟಕ್ಕಿವೆ**
ಹಳೆ ಬನಶಂಕರಿ ಪೂರ್ವ-ಉತ್ತರ ಕಾರ್ನರ್, 40x50, (60 ಅಡಿ ರಸ್ತೆ) ಪೂರ್ವ-ದಕ್ಷಿಣ ಕಾರ್ನರ್ 40x65, ಪಶ್ಚಿಮ 30x40 (ಅಕ್ಕ-ಪಕ್ಕ) ಹಳೆ ಕುಂದುವಾಡ ಪೂರ್ವ 30x40, ಪಿ.ಜೆ. ಬಡಾವಣೆ ಪಶ್ಚಿಮ 19x70.
ಐಗೂರು ವಿಜಯಕುಮಾರ್
99457 02495

**ಕ್ರಯಪತ್ರ ಕಳೆದಿದೆ**
#152, 7ನೇ ಕ್ರಾಸ್, ಲೇಬರ್ ಕಾಲೋನಿಯಿಂದ ಡಿಸಿಎಂ ಟೌನ್‌ಶಿಪ್‌ಗೆ ಮನೆ ಸ್ಥಳಾಂತರಿಸುವಾಗ ಕ್ರಯದ ಮೂಲ ಪತ್ರ ಮಹ್ಮದ್ ಅಲ್ಲಾಭಕ್ಷ್ ಬಿನ್ ಲೇಟ್ ಮಹ್ಮದ್ ಹನಿಫ್‌ಸಾಬ್ ಎಂಬುವವರ ಹೆಸರಿಗೆ ಆದ ಕ್ರಯ ಪತ್ರ ಕಳೆದಿದೆ. ಸಿಕ್ಕವರು ಈ ನಂ.ಗೆ ಫೋನ್ ಮಾಡಿ.
94486 66693
ತಂದು ಕೊಟ್ಟರೆ ಸೂಕ್ತ ಬಹುಮಾನ ಕೊಡಲಾಗುವುದು.

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಜಮೀನು ಮಾರಾಟಕ್ಕಿದೆ**
NH4 ರಸ್ತೆಗೆ, 10 ಎಕರೆ ಜಮೀನು ಮಾರಾಟಕ್ಕಿದೆ. ಚಳ್ಳಕೆರೆ ಟೋಲ್ ಹತ್ತಿರ, (@ Rs. 1 crore per acre)
63608 66997

**ಸೈಟ್, ಮನೆ ಮಾರಾಟಕ್ಕೆ**
ಆಂಜನೇಯ ಬಡಾವಣೆ 30x40 ಮನೆ, ಉತ್ತರ 30x42 ಮನೆ, ಪೂರ್ವ 30x40 ಸೈಟ್, ಉತ್ತರ 35x45 ಸೈಟ್, ದಕ್ಷಿಣ 30x43 ಮನೆ ಕೆಳಗೆ+ಮೇಲೆ ದಕ್ಷಿಣ 30x55.5 ಸೈಟ್ ಉತ್ತರ 60x40 ಉತ್ತರ 30x43 Demolish 30x45 ಮನೆ (ಬಾಡಿಗೆ ಬರುತ್ತೆ)
ಕಿರಣ್ ಭೂಸನೂರ್ (ಏಜೆಂಟ್)
98440 63409, 97315 63409

**COSDARM HAIR & SKIN CARE INSTITUTE**
ಉಚಿತ ಉಚಿತ ಉಚಿತ
ಸೌಂದರ್ಯ ಮತ್ತು ಕೂದಲು ರಕ್ಷಣೆ ತರಗತಿಗಳು ಪ್ರವೇಶ ತೆರೆಯಲಾಗಿದೆ.
ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
76192 57443
81975 72499 C/A

**ಕೇಬಲ್ ಹುಡುಗರು ಬೇಕಾಗಿದ್ದಾರೆ**
ಕೇಬಲ್ ಕೆಲಸ ಬರಬೇಕು. ಅಂತಹವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ. :
99022 09820

**ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.**
ನಂ. ದಾಮಪಾ:ಕಾಅ1:ಕೊ.01/2023–24 ದಿನಾಂಕ: 22.12.2023
**ದರವಾರು ಆಹ್ವಾನ ಪ್ರಕಟಣೆ**
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ)
ದಾವಣಗೆರೆ ಮಹಾನಗರ ಪಾಲಿಕೆಯಿಂದ ಕೈಗೊಳ್ಳುವ ವಿವಿಧ ಸಿವಿಲ್ ಕಾಮಗಾರಿಯಲ್ಲಿ ಎಂ–40, 80.ಎಂ.ಎಂ ಸ್ಪೆಸಿಫಿಕೇಷನ್‌ವುಳ್ಳ ಪೇವರ್‌ಗಳನ್ನು ಬಳಸಲು ಉದ್ದೇಶಿಸಿದ್ದು, ಎಸ್.ಆರ್‌ಗಳಲ್ಲಿ ದರಗಳು ಲಭ್ಯವಿಲ್ಲದಿರುವುದರಿಂದ ದರ ಅನುಮೋದನೆಗಾಗಿ, ಮಾರುಕಟ್ಟೆಯ ತುಲನಾತ್ಮಕ ದರಗಳನ್ನು ಪಡೆಯಲು (ಇಂಡೆಂಟ್ ಸಂಖ್ಯೆ : DMA/2023- 24/PREQUAL_TENDER_NUMBER_10) ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕೊಟೇಷನ್ ಆಹ್ವಾನ ಮಾಡಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರು/ ಸರಬರಾಜುದಾರರು ಕೆ.ಪಿ.ಪಿ. ಪೋರ್ಟಲ್ ವೆಬ್ https://kppp.karnataka.gov.in ನಲ್ಲಿ ಕೊಟೇಷನ್ ಮೂಲಕ ದರಗಳನ್ನು ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆ.ಪಿ.ಪಿ. ಸಹಾಯಕ ದೂರವಾಣಿ ಸಂಖ್ಯೆ: +91–8046010000+91–8068948777 ರಿಂದ ಮಾಹಿತಿ ಪಡೆಯಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಕಛೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ. ಕೊಟೇಷನ್ ಆಹ್ವಾನದ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 29–12–2023 ಸಮಯ : 16.30 ಕೊಟೇಷನ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 30–12–2023 ಸಮಯ : : 16.30 ಕೊಟೇಷನ್ ತೆರೆಯುವ ದಿನಾಂಕ & ವೇಳೆ 01–01–2024 ಸಮಯ :10.00
ಸಹಿ/– ಕಾರ್ಯಪಾಲಕ ಅಭಿಯಂತರರು (ಸಿವಿಲ್) ಮಹಾನಗರ ಪಾಲಿಕೆ, ದಾವಣಗೆರೆ
ವಾಸಾಇ/ಡಿವಿಜಿ/434/ ಕೆಎಸ್‌ಎಂಸಿಎ/2023–24

**ಪಾರ್ಟನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಶಂಕರಲೀಲಾ ಫ್ಯೂಯಲ್ ಸ್ಟೇಷನ್
ಜೈನ್ ಟೆಂಪಲ್ ಬಳಿ, ಆವರಗೆರೆ-ದಾವಣಗೆರೆ.
ಮೊ. 90190-94446

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮತ್ತು ಟೆಲಿಕಾಲರ್ ಹುದ್ದೆಗೆ ಮಿನಿಮಮ್ 2 ವರ್ಷ ಅನುಭವ ಇರುವ ಯುವಕ/ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ :
97392 94066

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್. ಕನ್‌ಸ್ಟ್ರಕ್ಷನ್ಸ್**
Tally ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆ.: 10 ರಿಂದ ಸಂ. : 6
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539

**1BHK ಮನೆ LEASEಗೆ ಇದೆ**
ಕೆ.ಬಿ. ಎಕ್ಸ್‌ಟೆನ್ಷನ್‌ನಲ್ಲಿ 1ನೇ ಮಹಡಿಯಲ್ಲಿ ಉತ್ತಮ ನೀರಿನ ಸೌಕರ್ಯವುಳ್ಳ ವಿಟ್ರಿಫೈಯ್ಡ್ ಟೈಲ್ಸ್ ಫ್ಲೋರಿಂಗ್ 1BHK ಮನೆ ಲೀಸ್‌ಗೆ ಇದೆ.
63615 12585

**ಪಾರ್ಟ್ ಟೈಂ ಜಾಬ್ಸ್**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
91487 33213

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ದ್ವಿಚಕ್ರ ವಾಹನಕ್ಕೆ ಸಾಲ ಸೌಲಭ್ಯ**
ಸಂಪರ್ಕಿಸಿ.
91486 70932, 97951 07268

**WANTED**
Order Booking - PUC
Contact along with Bio Data.
AK TRADERS
BAPUJI HOSPITAL ROAD PJ EXTENSION

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**WANTED**
For marketing Office Work And Helpers.
Kalpataru Plywoods
S.Nijalingappa, Layout, Davanagere.
94483 41142

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಮತ್ತು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಮೆ|| ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
#43H, SJJM ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

**ಹೋಟೆಲ್ ಗಾಡಿ ಬಾಡಿಗೆಗಿದೆ**
ತಳ್ಳುವ ಕಬ್ಬಿಣದ ಗಾಡಿ
8 ಡೋರ್, 3 ಸೇಲ್ಫ್ ಕೆಳಗೆ ಬಾಕ್ಸ್, 4 ಬೈಕ್ ವ್ಹೀಲ್‌ಗಳಿವೆ.
90080 92650

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಶ್ರೀ ಮಾತಾ ಟ್ರಸ್ಟ್ ಶಾಸ್ತ್ರೀಹಳ್ಳಿ, ದಾವಣಗೆರೆ ವೃದ್ಧಾಶ್ರಮ**
ವೃದ್ಧರಿಗೆ ವಾಸಕ್ಕೆ ಯೋಗ್ಯವಾದ ರೂಂಗಳು, ಸುವ್ಯವಸ್ಥಿತವಾದ ಊಟದ ವ್ಯವಸ್ಥೆ, ಸುಂದರವಾದ ಪರಿಸರ, ಧ್ಯಾನ ಮಂದಿರದ ಸೌಲಭ್ಯವಿದೆ. ಸಂಪರ್ಕಿಸಿ :
97319 93770

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.3.1.2024ರ ಬುಧವಾರ
ದಿ.4.1.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಜಮೀನು ಮಾರಾಟಕ್ಕಿದೆ**
$5^1/_2$ ಗುಂಟೆ ಜಾಗ ಅಪೂರ್ವ ಹೋಟೆಲ್ ಎದುರು ಸಿ.ಆರ್.ಸಿ. ಸೆಂಟರ್ ಹತ್ತಿರ ಜಮೀನು ಮಾರಾಟಕ್ಕಿದೆ.
70196 18397

**ಉದ್ಯೋಗಾವಕಾಶ**
ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ದುರ್ಗಾಸ್ಥಳ ಚಿಟ್‌ಫಂಡ್ ಕಂಪನಿ ವತಿಯಿಂದ ಚನ್ನಗಿರಿ ಮತ್ತು ದಾವಣಗೆರೆ ಶಾಖೆಯಲ್ಲಿ ಕೆಲಸ ಮಾಡಲು ಎಕ್ಸಿಕ್ಯೂಟಿವ್ ಮತ್ತು ಕಲೆಕ್ಷನ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಇನ್ಸೆಂಟಿವ್, ಅನುಭವವಿರುವವರಿಗೆ ಆದ್ಯತೆ.
96863 00769, 96864 12409

**ಬೇಕಾಗಿದ್ದಾರೆ**
ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡಲು ಆಫೀಸ್ ಬಾಯ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಬಿ.ಜಿ. ಬಸವರಾಜಪ್ಪ
SJJM ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
ಸಮಯ : ಮಧ್ಯಾಹ್ನ 1 ರಿಂದ ಸಂಜೆ 5ರವರೆಗೆ
99001 42052

## ಲಯನ್ಸ್ ಕ್ಲಬ್ ಸಹಯೋಗದಲ್ಲಿ ಇಂದು ನಗರದಲ್ಲಿ ವಿಕಲ ಚೇತನರ ದಿನಾಚರಣೆ

ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ವಿಕಲಚೇತನರ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 50 ಜನ ಸಾಧಕರಿಗೆ 'ವಿಶೇಷ ಸಾಧನಾ ಪುರಸ್ಕಾರ' ಪ್ರಶಸ್ತಿ ವಿತರಣಾ ಸಮಾರಂಭವನ್ನು ಲಯನ್ಸ್ ಕ್ಲಬ್‌ನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ವೆಂಕಟೇಶ್ ಎಂ.ವಿ. ವಹಿಸುವರು. ಕಾರ್ಯಕ್ರಮದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ನೀಲಿ ಉಮೇಶ್ ವಹಿಸುವರು. ಕಾರ್ಯಕ್ರಮವನ್ನು ಶ್ರೀಮತಿ ಪುಷ್ಪಲತಾ ಬಾವಿಮಠ, ಡಾ. ಬಿ.ಎಸ್. ನಾಗಪ್ರಕಾಶ್ ಉದ್ಘಾಟಿಸುವರು.

ಮುಖ್ಯ ಅತಿಥಿಗಳು : ವಿನಾಯಕ ಪೈಲ್ವಾನ್, ಶ್ರೀಮತಿ ರೇಣುಕ, ಡಾ. ಕೆ.ಕೆ. ಪ್ರಕಾಶ್, ಡಾ. ಸುರೇಶ್ ಬಿ. ಇಟ್ನಾಳ್, ಕೆ.ಎಸ್. ಮಂಜುನಾಥ, ಎ. ಫಕೃದ್ದಿನ್, ಮಂಜುನಾಥ ಹೊಸಕೆರೆ, ಸುರೇಶ್ ಭಂಡಾರಿ, ವೀರಯ್ಯಸ್ವಾಮಿ, ಡಾ. ಪುಷ್ಪಲತಾ, ರೂಪಾ ನಾಯ್ಕ ಕೆ.ಬಿ, ರೂಪಾ ನಾಯ್ಕ ಕೆ.ಬಿ, ಡಾ. ಕಿರಣ್ ನಾಯ್ಕ ಬಿ, ಎನ್.ಆರ್.ನಾಗಭೂಷಣ್ ರಾವ್, ಡಾ. ಸುರೇಶ್ ಹನಗವಾಡಿ, ಸುಮನ, ಶ್ರೀಮತಿ ಮೀನಾಕ್ಷಿ. ಕರ್ನಾಟಕ ರಾಜ್ಯ ವಿಕಲಚೇತನರ ಆರ್.ಪಿ.ಡಿ. ಟಾಸ್ಕ್ ಫೋರ್ಸ್ (ಬೆಂಗಳೂರು) ಜಿಲ್ಲಾ ಘಟಕ ಲಯನ್ಸ್ ಕ್ಲಬ್ (ದಾವಣಗೆರೆ) ಇವರ ಸಹಯೋಗದೊಂದಿಗೆ ಮಾನಸ ಸಾಧನಾ ವಿಕಲಚೇತನರ ಸೇವಾ ಟ್ರಸ್ಟ್ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ಕೆ.ಎಸ್.ಆರ್.ಟಿ.ಸಿ. ಅಪಘಾತ ಪರಿಹಾರ 10 ಲಕ್ಷ ರೂ.ಗಳಿಗೆ ಹೆಚ್ಚಳ



ಬೆಂಗಳೂರು, ಡಿ. 27 – ಅಪಘಾತ ಪರಿಹಾರ ನಿಧಿಯ ಮೂಲಕ ನೀಡಲಾಗುವ ಪರಿಹಾರವನ್ನು ಜನವರಿ 1ರಿಂದ 10 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ರಾಜ್ಯ ರಸ್ತೆ ಸಾರಿಗೆ ನಿಗಮ ತಿಳಿಸಿದೆ. ಪ್ರಸಕ್ತ 3 ಲಕ್ಷ ರೂ.ಗಳ ಪರಿಹಾರ ನೀಡಲಾಗುತ್ತಿದೆ.

ಅಪಘಾತಕ್ಕೀಡಾದವರಿಗೆ ಹೆಚ್ಚುವರಿ ಪರಿಹಾರ ನೀಡುವ ಸಲುವಾಗಿ ಪ್ರಯಾಣಿಕರಿಂದ ಹೆಚ್ಚುವರಿ ಹಣ ವಸೂಲಿ ಮಾಡಲಾಗುವುದು. 50ರಿಂದ 99 ರೂ.ಗಳ ಪ್ರಯಾಣಕ್ಕೆ 1 ರೂ. ಹಾಗೂ ಅದಕ್ಕೂ ಹೆಚ್ಚಿನ ದರದ ಪ್ರಯಾಣಕ್ಕೆ 2 ರೂ. ವಸೂಲಿ ಮಾಡಲಾಗುವುದು. ಇದನ್ನು ಅಪಘಾತ ಪರಿಹಾರ ನಿಧಿಯಲ್ಲಿ ಜಮಾ ಮಾಡಲಾಗುವುದು.

# ಬಾಲ್ಯ ವಿವಾಹ ತಡೆಗೆ ಜಾಗೃತಿ : ಜಿಲ್ಲಾಧಿಕಾರಿ ಸೂಚನೆ

ದಾವಣಗೆರೆ, ಡಿ. 27 - ಬಾಲ್ಯ ವಿವಾಹಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ಮತ್ತು ಶಾಲಾ -ಕಾಲೇಜುಗಳಲ್ಲಿ ಬಾಲ್ಯ ವಿವಾಹ ತಡೆಟ್ಟುವ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿ, ಬಾಲ್ಯ ವಿವಾಹ ಮುಕ್ತ ಸಮಾಜಕ್ಕೆ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅಧಿಕಾರಿಗಳಿಗೆ ತಿಳಿಸಿದರು.

ತಮ್ಮ ಕಚೇರಿಯಲ್ಲಿ ನಡೆದ ಬಾಲ್ಯ ವಿವಾಹ ತಡೆ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ-2005 ಯೋಜನೆ ಹಾಗೂ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹ ನಿಷೇಧದ ಕುರಿತು ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಈಗಾಗಲೇ 235 ಅರಿವು ಕಾರ್ಯಕ್ರಮಗಳನ್ನು ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್ ತಿಳಿಸಿದರು.

ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗಿ ನಡೆಯುವ ಕಡೆ ಜಾಗೃತಿ ಮೂಡಿಸಬೇಕು. ಆಗ ಮಾತ್ರ ಬಾಲ್ಯ ವಿವಾಹ ತಡೆ ಪ್ರಯತ್ನ ಫಲ ನೀಡುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದರು.

**ಮಕ್ಕಳ ಭಿಕ್ಷಾಟನೆಗೆ ತಡೆ :** ನಗರದಲ್ಲಿ ತಾಯಂದಿರು ಮಕ್ಕಳನ್ನು ಬಳಸಿಕೊಂಡು ಭಿಕ್ಷಾಟನೆ ಮಾಡಿದ ಹತ್ತು ಪ್ರಕರಣಗಳನ್ನು ದಾಖಲಿಸಲಾಗಿದೆ. ಆದರೆ, ಜಿಲ್ಲೆಯ ಉಳಿದೆಡೆ ಈ ರೀತಿಯ ಕೃತ್ಯಗಳು ನಡೆದಿರುವ ಬಗ್ಗೆ ಅಧಿಕಾರಿಗಳು ಪರಿಶೀಲಿಸಬೇಕು.



ಘಟನೆಗೆ ಕಾರಣವಾದವರಿಗೆ ಶಿಕ್ಷೆ ನೀಡಬೇಕಿದೆ. ಈ ರೀತಿಯ ಕೃತ್ಯದಲ್ಲಿ ತೊಡಗದಂತೆ ಶಿಕ್ಷಣವನ್ನೂ ಕೊಡಬೇಕಿದೆ ಎಂದು ಜಿಲ್ಲಾಧಿಕಾರಿ ವೆಂಕಟೇಶ್ ಹೇಳಿದರು.

**ಅನಾಥರಿಗೆ ನೆರವು ಕಲ್ಪಿಸಿ :** ತಂದೆ - ತಾಯಿಯಿಂದ ದೂರವಾದ ಮಕ್ಕಳಿಗೆ ಸರ್ಕಾರದ ವತಿಯಿಂದ ನೀಡಬೇಕಾದ ನೆರವು ಕಲ್ಪಿಸಬೇಕು. ಇಂತಹ ಪ್ರಕರಣವೊಂದರ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದ ನಂತರವೂ ನೆರವಿಗೆ ಕ್ರಮ ತೆಗೆದುಕೊಂಡಿಲ್ಲ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣನವರ್ ಆಕ್ಷೇಪಿಸಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ರಾಜಕುಮಾರ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಸಾಲಕ್ಕೆ ಅಂಜಿ ಸ್ವಾಧಾರಕ್ಕೆ ಬಂದರು!

ಮಹಿಳಾ ಸ್ವಸಹಾಯ ಸಂಘಗಳಿಂದ ಸಾಲ ಪಡೆದ ಹಲವಾರು ಮಹಿಳೆಯರು, ಸಾಲ ವಾಪಸ್ ಪಾವತಿಸುವಲ್ಲಿ ಸಮಸ್ಯೆಯಾಗಿ ಸರ್ಕಾರದ ಸ್ವಾಧಾರ ಯೋಜನೆಯಡಿ ನಿರ್ವಹಿಸುತ್ತಿರುವ ಮಹಿಳಾ ನಿಲಯಗಳಿಗೆ ದಾಖಲಾಗುತ್ತಿದ್ದಾರೆ.

ಈ ಮಹಿಳೆಯರನ್ನು ಹುಡುಕಿಕೊಂಡು ಸ್ವಸಹಾಯ ಸಂಘಗಳ ಇತರೆ ಸದಸ್ಯರು ಸ್ವಾಧಾರ ಕೇಂದ್ರಗಳಿಗೇ ಬರುತ್ತಿದ್ದಾರೆ ಎಂದು ಸಭೆಗೆ ಮಹಿಳಾ ನಿಲಯದವರು ತಿಳಿಸಿದರು.

ಸಾಕಷ್ಟು ಸಂದರ್ಭಗಳಲ್ಲಿ ಮಹಿಳೆಯರ ಹೆಸರಿನಲ್ಲಿ ಗಂಡನೇ ಸಾಲ ಪಡೆದು ಪೋಲು ಮಾಡಿರುವುದು ಕಂಡು ಬಂದಿದೆ.

ಸಾಲದ ಜವಾಬ್ದಾರಿಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸಬೇಕಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣನವರ್ ಹೇಳಿದರು.

### ಕಾನೂನು ಸಂಘರ್ಷಕ್ಕೆ ಸಿಲುಕಿದ ಅಪ್ರಾಪ್ತರಿಗೆ ಮಾರ್ಗದರ್ಶಕರು

ಕಾನೂನು ಸಂಘರ್ಷಕ್ಕೆ ಸಿಲುಕಿದ ಅಪ್ರಾಪ್ತರಲ್ಲಿ ಬಹುತೇಕರು ಸ್ಲಂ ನಿವಾಸಿಗಳು, ಅನಾಥರು ಇಲ್ಲವೇ ನಿರ್ಲಕ್ಷಿತರು ಎಂಬುದು ಸಮೀಕ್ಷೆಯಿಂದ ತಿಳಿದು ಬಂದಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್ ಹೇಳಿದರು. ಸಣ್ಣ ಪುಟ್ಟ ತಪ್ಪು ಮಾಡಿ ಸಮಸ್ಯೆಗೆ ಸಿಲುಕಿರುವ ಇವರು, ಮುಂದಿನ ದಿನಗಳಲ್ಲಿ ದೊಡ್ಡ ಅಪರಾಧಗಳಿಗ ಸಿಲುಕದಂತೆ ತಡೆಯಬೇಕಿದೆ. ಇದಕ್ಕಾಗಿ ಇವರಿಗೆ ಮಾರ್ಗದರ್ಶಕರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದರು. ಕಾನೂನು ಪದವೀಧರರೂ ಸೇರಿದಂತೆ ಆಸಕ್ತ 50-60 ಜನರಿಗೆ ಮಾರ್ಗದರ್ಶನದ ತರಬೇತಿ ಕೊಡಲಾಗುವುದು ಎಂದರು.

### ಸರ್ಕಾರದಿಂದ ಸಿಗದ 'ಉಪಕಾರ'

ಮಕ್ಕಳ ಪಾಲನಾ ಸಂಸ್ಥೆಯಿಂದ ಬಿಡುಗಡೆಯಾಗುವ 18 ವರ್ಷ ಮೀರಿದವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ರಾಜ್ಯ ಸರ್ಕಾರ 'ಉಪಕಾರ' ಎಂಬ ಹೆಸರಿನ ಯೋಜನೆ ಜಾರಿಗೆ ತಂದಿದೆ. ಇದರ ಅನ್ವಯ, 18 ವರ್ಷ ಮೀರಿದವರು ಆರ್ಥಿಕವಾಗಿ ಸ್ವಾವಲಂಬಿಯಾಗುವವರೆಗೆ ಇಲ್ಲವೇ ಮೂರು ವರ್ಷಗಳವರೆಗೆ ತಿಂಗಳಿಗೆ 5 ಸಾವಿರ ರೂ. ನೀಡಬೇಕಿದೆ. ಈ ಬಗ್ಗೆ ಜಿಲ್ಲೆಯಿಂದ 13 ಜನರಿಗೆ ನೆರವು ನೀಡಲು ಪ್ರಸ್ತಾವನೆ ಕಳಿಸಲಾಗಿದೆ. ಆದರೆ, ಸರ್ಕಾರದಿಂದ ಇನ್ನೂ ಅನುದಾನ ದೊರೆತಿಲ್ಲ ಎಂದು ಸಭೆಗೆ ಅಧಿಕಾರಿಗಳು ತಿಳಿಸಿದರು.

## ಇಂದು ತರಳಬಾಳು ಶ್ರೀಗಳಿಂದ ಭರಮಸಾಗರದ ಕೆರೆಗಳ ವೀಕ್ಷಣೆ

ಭರಮಸಾಗರ ಏತ ನೀರಾವರಿಯ ಕೆರೆಗಳ ವೀಕ್ಷಣೆ ಕಾರ್ಯಕ್ರಮ ಇಂದು ಬೆಳಿಗ್ಗೆ 11 ಕ್ಕೆ ದೊಡ್ಡಕೆರೆ ಬಳಿ ನಡೆಯಲಿದೆ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಂ. ಚಂದ್ರಪ್ಪ, ಬಿ. ದೇವೇಂದ್ರಪ್ಪ, ರಾಜೇಶ್ ಅಮ್ಮಿನಬಾವಿ, ರಾಜೇಂದ್ರ ಪೋದ್ದಾರ್, ಜಿ.ಎನ್. ಚಂದ್ರಪ್ಪ, ಮಲ್ಲಿಕಾರ್ಜುನ ಬಿ. ಗಾಂಗೆ, ಹೆಚ್. ಆಂಜನೇಯ, ಎಸ್.ವಿ. ರಾಮಚಂದ್ರ, ಹೆಚ್. ಪಿ. ರಾಜೇಶ್, ಶಿವಾನಂದ ಎಸ್. ಬಣಕಾರ್, ಎನ್. ಸುಜಾತ. ಆರ್.ಬಿ. ಮಂಜುನಾಥ್, ಹೆಚ್.ಬಿ. ಮಲ್ಲಪ್ಪ, ಕೆ.ಎಂ. ಮನೋಜ್‌ಕುಮಾರ್ ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ರೈತರ ಪ್ರತಿಭಟನೆ

ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಖಂಡಿಸಿ ಇಂದು ಬೆಳಿಗ್ಗೆ 11 ಗಂಟೆಗೆ ನೀರಾವರಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡರಾದ ಕೊಳೇನಹಳ್ಳಿ ಬಿ.ಎಂ. ಸತೀಶ್, ಲೋಕಿಕೆರೆ ನಾಗರಾಜ್, ಬೆಳವನೂರು ನಾಗೇಶ್ವರರಾವ್, ಧನಂಜಯ ಕಡ್ಲೆಬಾಳ್ ತಿಳಿಸಿದ್ದಾರೆ.

## ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ ಹಾಲೇಶ್, ಉಪಾಧ್ಯಕ್ಷರಾಗಿ ಮನೋಹರ್



**ಕೊಮಾರನಹಳ್ಳಿ**

ಮಲೇಬೆನ್ನೂರು, ಡಿ.27- ಕೊಮಾರನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್.ಹೆಚ್.ಹಾಲೇಶ್ ಮತ್ತು ಉಪಾಧ್ಯಕ್ಷರಾಗಿ ಪಾರೇರ ಮನೋಹರ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಹಾಲೇಶ್ ಮತ್ತು ಶ್ರೀಮತಿ ರಶ್ಮಿ ಅಣ್ಣಪ್ಪ ಅವರು ತಲಾ 6 ಮತಗಳನ್ನು ಪಡೆದಾಗ ಲಾಟರಿ ಮಾಡಲಾಯಿತು.

ಲಾಟರಿಯಲ್ಲಿ ಹಾಲೇಶ್ ಅವರ ಹೆಸರು ಬಂದಿದ್ದರಿಂದ ಅಧ್ಯಕ್ಷರಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಪಾರೇರ ಮನೋಹರ 7 ಮತಗಳನ್ನು ಪಡೆದು ಆಯ್ಕೆಯಾದರೆ, ಪ್ರತಿ ಸ್ಪರ್ಧಿ ಜಿ.ಮಹೇಶ್ವರಪ್ಪ 5 ಮತಗಳನ್ನು ಪಡೆದು ಪರಾಭವಗೊಂಡರು.

ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಸಂಘದ ನಿರ್ದೇಶಕರಾದ ಜಿ.ರಂಗಪ್ಪ, ಯು.ಮಂಜುನಾಥ್, ಕೆ.ಎಸ್.ನಿಂಗರಾಜ್, ಕೆ.ಎಂ.ಚಂದ್ರಯ್ಯ, ಶ್ರೀಮತಿ ಶಾಂತಮ್ಮ, ಶ್ರೀಮತಿ ಸುಮ ಐರಣಿ ಮಾರುತಿ, ಶ್ರೀಮತಿ ಗಂಗಮ್ಮ ಮಡಿವಾಳ ವೀರಭದ್ರಪ್ಪ ಈ ವೇಳೆ ಹಾಜರಿದ್ದು, ಮತ ಚಲಾಯಿಸಿದರು.

## ನಗರದಲ್ಲಿ ಇಂದು ಕರುನಾಡ ಸಮರ ಸೇನೆಯಿಂದ ರಾಜ್ಯೋತ್ಸವ

ದಾವಣಗೆರೆ, ಡಿ. 27- ಕರುನಾಡ ಸಮರ ಸೇನೆ ವತಿಯಿಂದ ನಾಳೆ ದಿನಾಂಕ 28 ರ ಗುರುವಾರ ಬೆಳಿಗ್ಗೆ 11.30 ಕ್ಕೆ ನಗರದ ರೋಟರಿ ಬಾಲಭವನದ ಆವರಣದಲ್ಲಿರುವ ಕೇಶವಮೂರ್ತಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸೇನೆಯ ಅಧ್ಯಕ್ಷ ಐಗೂರು ಬಿ.ಕೆ. ಸುರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಉದ್ಯಮಿ ಶ್ರೀನಿವಾಸ ಶಿವಗಂಗಾ ಅವರು ರೈತರಿಗೆ ವಿಮಾ ಬಾಂಡ್ ವಿತರಿಸಲಿದ್ದಾರೆ.

ಸೇನೆ ಸಂಸ್ಥಾಪಕ ಅಧ್ಯಕ್ಷ ಸುರೇಶ್ ಐಗೂರು ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವಿನಾಯಕ ಪೈಲ್ವಾನ್, ಡಾ.ಎಂ.ವಿ. ವೆಂಕಟೇಶ್, ಉಮಾ ಪ್ರಶಾಂತ್, ಬಿ.ಜಿ. ಅಜಯ್ ಕುಮಾರ್, ಎಸ್.ಟಿ. ವೀರೇಶ್, ನಿರ್ಮಲ ಮೈಕೆಲ್, ಸಾಧಿಕ್ ಪೈಲ್ವಾನ್, ಭವ್ಯ ಮೇಘರಾಜ್, ಷಣ್ಮುಖಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಅಣಬೇರು ಶಿವಕುಮಾರ್, ಜಿ.ಹೆಚ್. ಮಾಲತೇಶ್, ಕರಿಬಸಪ್ಪ ಪೈಲ್ವಾನ್, ವಸಂತಕುಮಾರ್, ಎಸ್. ಆನಂದ್, ಶ್ರೀಧರ್ ಮಲ್ಲಾಪುರ ಇದ್ದರು.

# ಜ.14ರಿಂದ ರಾಹುಲ್ 'ಭಾರತ ನ್ಯಾಯ ಯಾತ್ರೆ'

ನವದೆಹಲಿ, ಡಿ. 27 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪೂರ್ವದ ಮಣಿಪುರದಿಂದ ಪಶ್ಚಿಮದ ಮುಂಬೈವರೆಗೆ 'ಭಾರತ ನ್ಯಾಯ ಯಾತ್ರೆ' ನಡೆಸಲಾಗುವುದು ಎಂದು ಕಾಂಗ್ರೆಸ್ ಘೋಷಿಸಿದೆ. ಜನವರಿ 14ರಿಂದ ಆರಂಭವಾಗುವ ಈ ಯಾತ್ರೆ 14 ರಾಜ್ಯಗಳು ಹಾಗೂ 85 ಜಿಲ್ಲೆಗಳ ಮೂಲಕ ಸಾಗಿ ಬರಲಿದೆ.

6,200 ಕಿ.ಮೀ. ಕ್ರಮಿಸಲಿರುವ ಈ ಯಾತ್ರೆ, ಮಾರ್ಚ್ 20ರಂದು ಮುಕ್ತಾಯಗೊಳ್ಳಲಿದೆ. ಮಣಿಪುರ, ನಾಗಾಲ್ಯಾಂಡ್, ಅಸ್ಸಾಂ, ಮೇಘಾಲಯ, ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ಒಡಿಶಾ, ಛತ್ತೀಸ್‌ಘಡ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಸ್ಥಾನ, ಗುಜರಾತ್ ಹಾಗೂ ಮಹಾರಾಷ್ಟ್ರಗಳ ಮೂಲಕ ಯಾತ್ರೆ ಸಾಗಿ ಬರಲಿದೆ.

ಭಾರತ್ ಜೋಡೋ ಯಾತ್ರೆ ನಂತರ ಕಾಂಗ್ರೆಸ್ ಪಕ್ಷವು ರಾಹುಲ್ ಗಾಂಧಿ ನೇತೃತ್ವದಲ್ಲಿ ಭಾರತ ನ್ಯಾಯ ಯಾತ್ರೆ ಕೈಗೊಳ್ಳಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಜನವರಿ 14ರಂದು ಮಣಿಪುರದ ಇಂಫಾಲದಲ್ಲಿ ಯಾತ್ರೆಗೆ ಹಸಿರು ನಿಶಾನೆ ತೋರಲಿದ್ದಾರೆ. ದೇಶದ ಜನರಿಗೆ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನ್ಯಾಯ ಒದಗಿಸುವುದು ಭಾರತ ನ್ಯಾಯ ಯಾತ್ರೆಯ ಮುಖ್ಯ ಗುರಿ ಎಂದು ರಮೇಶ್ ಹೇಳಿದ್ದಾರೆ.



**ಪೂರ್ವದಿಂದ ಪಶ್ಚಿಮಕ್ಕೆ 6,200 ಕಿ.ಮೀ. ಸುದೀರ್ಘ ಯಾತ್ರೆ**

ಈ ಯಾತ್ರೆಯ ವೇಳೆ ಮಹಿಳೆಯರು, ಯುವಕರು ಹಾಗೂ ದಮನಿತ ವರ್ಗದವರ ಜೊತೆ ಸಂವಾದ ನಡೆಸಲಾಗುವುದು.

ಬಹುತೇಕ ಯಾತ್ರೆಯು ಬಸ್ ಮೂಲಕ ನಡೆಯಲಿದೆ. ಕೆಲ ಮಾರ್ಗಗಳಲ್ಲಿ ಪಾದಯಾತ್ರೆ ಮಾಡಲಾಗುವುದು ಎಂದು ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಮಣಿಪುರಕ್ಕೆ ಆಗಿರುವ ಗಾಯದ ನಿವಾರಣೆಯ ಪ್ರಮುಖ ಉದ್ದೇಶದಿಂದ ಈ ರಾಜ್ಯದಿಂದಲೇ ಯಾತ್ರೆ ಆರಂಭಿಸಲಾಗುತ್ತಿದೆ ಎಂದೂ ವೇಣುಗೋಪಾಲ್ ತಿಳಿಸಿದ್ದಾರೆ. ಮಣಿಪುರದಲ್ಲಿ ಕುಕಿ ಹಾಗೂ ಮೀಟಿ ಸಮುದಾಯಗಳ ನಡುವೆ ತೀವ್ರ ಸಂಘರ್ಷ ನಡೆದು 200ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದರು.

ಭಾರತ್ ಜೋಡೋ ಯಾತ್ರೆಯ ವೇಳೆ ರಾಹುಲ್ ಗಾಂಧಿ ಅವರು ಆರ್ಥಿಕ ಅಸಮಾನತೆ, ಧೃವೀಕರಣ ಹಾಗೂ ಸರ್ವಾಧಿಕಾರದ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರು. ನ್ಯಾಯ ಯಾತ್ರೆಯ ವೇಳೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ಜನರಿಗೆ ಒದಗಿಸುವುದು ಪ್ರಮುಖ ಅಂಶವಾಗಲಿದೆ ಎಂದು ರಮೇಶ್ ಹೇಳಿದ್ದಾರೆ.

ಐ.ಎನ್.ಡಿ.ಐ.ಎ. ಮೈತ್ರಿಪಕ್ಷಗಳು ಈ ಯಾತ್ರೆಯಲ್ಲಿ ಭಾಗಿಯಾಗಲಿವೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ವೇಣುಗೋಪಾಲ್, ಈ ವಿವರಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದಿದ್ದಾರೆ.

ಈ ಹಿಂದೆ ಭಾರತ್ ಜೋಡೋ ಯಾತ್ರೆ ನಡೆದಾಗ ಹಲವು ಪಕ್ಷಗಳ ಮುಖಂಡರು ಪಾಲ್ಗೊಂಡಿದ್ದರು ಎಂದೂ ರಮೇಶ್ ಹೇಳಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೆಪ್ಟೆಂಬರ್ 7, 2022ರಿಂದ ಜನವರಿ 30ರವರೆಗೆ ಭಾರತ್ ಜೋಡೋ ಯಾತ್ರೆ ನಡೆಸಿದ್ದರು.

## ಹ್ಯಾಂಡ್‌ಬಾಲ್ ಪಂದ್ಯಾವಳಿಗೆ ದಾನೇಶ್ವರಿ ಸೊಪ್ಪಿನ ಮಠ ಆಯ್ಕೆ



ದಾವಣಗೆರೆ, ಡಿ.27- 2023-24ನೇ ಸಾಲಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕ್ರೀಡಾ ಚಟುವಟಿಕೆಯಲ್ಲಿ ರಾಜ್ಯ ಮಟ್ಟದಲ್ಲಿ ವಿಜೇತರಾಗಿ, ಹರಿಯಾಣ ರಾಜ್ಯದಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಬಾಲಕಿಯರ ಹ್ಯಾಂಡ್ ಬಾಲ್ ಪಂದ್ಯಾವಳಿಗೆ ನಗರದ ಶ್ರೀಮತಿ ಪುಷ್ಪ ಶಾಮನೂರು ಮಹಾಲಿಂಗಪ್ಪ ಪದವಿ ಪೂರ್ವ ಕಾಲೇಜಿನ ದಾನೇಶ್ವರಿ ಸೊಪ್ಪಿನ ಮಠ ಸೇರಿದಂತೆ, ದಾವಣಗೆರೆ ಜಿಲ್ಲೆಯಿಂದ ಇಬ್ಬರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

## ವಂಚನೆಯ ಸಾಲದ ಆಪ್ ಜಾಹೀರಾತು ಪ್ರಕಟಿಸದಂತೆ ಸೂಚನೆ

ನವದೆಹಲಿ, ಡಿ. 27 – ಆನ್‌ಲೈನ್ ವೇದಿಕೆಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವಂಚನಾತ್ಮಕ ಸಾಲದ ಆಪ್‌ಗಳ ಜಾಹೀರಾತುಗಳು ಪ್ರಕಟವಾಗಬಾರದು ಎಂಬ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

ವಂಚನಾತ್ಮಕ ಹಾಗೂ ಅಕ್ರಮ ಸಾಲದ ಆಪ್‌ಗಳನ್ನು ಪ್ರಕಟಿಸಬಾರದು. ಇವುಗಳು ಜನರ ದಾರಿ ತಪ್ಪಿಸುತ್ತವೆ ಹಾಗೂ ಇಂಟರ್‌ನೆಟ್ ಬಳಸುವ ಜನರನ್ನು ಶೋಷಣೆಗೆ ಒಳಪಡಿಸುತ್ತವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಐ.ಟಿ. ಖಾತೆ ರಾಜ್ಯ ಸಚಿವ ಚಂದ್ರಶೇಖರ್ ಹೇಳಿದ್ದಾರೆ. ವಂಚನೆ ಮಾಡುವ ಈ ಆಪ್‌ಗಳು, ಸ್ವಲ್ಪ ಮೊತ್ತದ ಸಾಲ ನೀಡಿ ಭಾರೀ ಬಡ್ಡಿ ವಸೂಲಿ ಮಾಡುತ್ತವೆ. ಕೆಲವೊಮ್ಮೆ ಬ್ಲಾಕ್‌ಮೇಲ್ ಹಾಗೂ ಬೆದರಿಕೆಗೆ ಮುಂದಾಗುತ್ತವೆ. ಇವುಗಳು ಆನ್‌ಲೈನ್ ವೇದಿಕೆಗಳಲ್ಲಿ ಜಾಹೀರಾತುಗಳನ್ನೂ ನೀಡುತ್ತಿವೆ.

## ಜಗಳೂರಿನಲ್ಲಿ ಇಂದು 'ಮಕ್ಕಳ ಹಬ್ಬ'

ಜೆ.ಎಂ. ಸ್ಮಾರಕ ಶಾಲೆ ವತಿಯಿಂದ ನಡೆಯುತ್ತಿರುವ 23ನೇ 'ಮಕ್ಕಳ ಹಬ್ಬ', 'ಮುಷೀರ್ ಉಲ್ ಮುಲ್ಕ್' ಹಾಗೂ ಜೆ.ಎಂ. ಇಮಾಂ ಸ್ಮಾರಕ 5ನೇ ವರ್ಷದ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಂದು ಸಂಜೆ 4.30 ಗಂಟೆಗೆ ಇಪ್ಪತ್ಮೂರನೇ ಮಕ್ಕಳ ಹಬ್ಬ ಕಾರ್ಯಕ್ರಮ ನಡೆಯಲಿದೆ.

ಅಧ್ಯಕ್ಷತೆಯನ್ನು ಹಿರಿಯ ಶಿಕ್ಷಕರಾದ ಎಸ್. ಹಾಲಪ್ಪ ವಹಿಸುವರು. ಕಾರ್ಯಕ್ರಮವನ್ನು ಎಸ್.ಹೆಚ್. ಮಸ್ತಾನ್ ಸಾಬ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜೆ.ಬಿ. ಖಲೀಲ್ ಸಾಬ್, ಜೆ.ಕೆ. ಮಹಮದ್ ಷರೀಫ್ ಆಗಮಿಸುವರು.

## ವಂಚನೆ : 278 ಕೋಟಿ ರೂ. ಜಪ್ತಿ

ನವದೆಹಲಿ, ಡಿ. 27 – ಮೊಬೈಲ್ ಆಪ್ 'ಹೆಚ್‌ಪಿಝೆಡ್ ಟೋಕ್' ಮೂಲಕ ಹೂಡಿಕೆದಾರರಿಗೆ ವಂಚನೆ ಮಾಡಿದ ಪ್ರಕರಣದಲ್ಲಿ 278 ಕೋಟಿ ರೂ.ಗಳ ಆಸ್ತಿ ಜಪ್ತಿ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲು 176.67 ಕೋಟಿ ರೂ.ಗಳ ಆಸ್ತಿ ವಶಪಡಿಸಿಕೊಳ್ಳಲಾಗಿತ್ತು.

ಈ ವಂಚನೆಗೆ ಸಂಬಂಧಿಸಿದಂತೆ 2021ರ ಅಕ್ಟೋಬರ್ ತಿಂಗಳಲ್ಲಿ ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ಎಫ್.ಐ.ಆರ್. ದಾಖಲಿಸಲಾಗಿತ್ತು. ಬಿಟ್‌ಕಾಯಿನ್ ಹಾಗೂ ಇತರೆ ಕ್ರಿಪ್ಟೋ ಕರೆನ್ಸಿಗಳಲ್ಲಿ ಮಾಡಲಾಗುವ ಹೂಡಿಕೆಗೆ ಭಾರೀ ಲಾಭ ನೀಡುವುದಾಗಿ ಜನರನ್ನು ಸೆಳೆದು ವಂಚಿಸಲಾಗಿತ್ತು.

## ಬೆಟ್ಟಿಂಗ್ ಆಪ್ ಪ್ರವರ್ತಕ ವಶಕ್ಕೆ

ಮುಂಬೈ, ಡಿ. 27 – ಮಹದೇವ್ ಆನ್‌ಲೈನ್ ಬೆಟ್ಟಿಂಗ್ ಆಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರವರ್ತಕ ಸೌರಭ್ ಚಂದ್ರಕರ್ ದುಬೈನಲ್ಲಿ ಗೃಹ ಬಂಧನದಲ್ಲಿರಿಸಲಾಗಿದೆ. ಹಸ್ತಾಂತರಕ್ಕಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬಹುಕೋಟಿ ಅಕ್ರಮ ಹಣದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಹೊಸ ಆರೋಪ ಪಟ್ಟಿ ಸಹ ದಾಖಲಿಸಲಿದೆ. ಈ ಹಿಂದೆ ಹಗರಣದಲ್ಲಿ ಭಾಗಿಯಾಗಿದ್ದ ಇನ್ನೋರ್ವ ಪ್ರವರ್ತಕ ರವಿ ಉಪ್ಪಲ್ ಬಂಧಿಸಲಾಗಿತ್ತು. ರೆಡ್ ಕಾರ್ನರ್ ನೋಟಿಸ್ ನಂತರ ದುಬೈ ಅಧಿಕಾರಿಗಳು ಬಂಧಿಸಿದ್ದರು.

## ನಗರದಲ್ಲಿಂದು ಶಿವಾನುಭವ ಸಂಪದ

ಶ್ರೀ ಅನ್ನದಾನೇಶ್ವರ ಶಾಖಾ ಮಠದಲ್ಲಿ ಇಂದು ಸಂಜೆ 6.30 ಕ್ಕೆ 265ನೇ ಶಿವಾನುಭವ ಸಂಪದ ನಡೆಯಲಿದೆ. ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ (ಹಾಲಕೆರೆ) ಸಾನ್ನಿಧ್ಯ ವಹಿಸುವರು.

ಡಾ. ವೀರೇಶ್ ಬಿರಾದಾರ್ ಉಪನ್ಯಾಸ ನೀಡುವರು. ಲಿಂ. ಶ್ರೀಮತಿ ರುದ್ರಮ್ಮ ಲಿಂ. ಎನ್.ಎ. ಗುಂಡಪ್ಪ ಇವರುಗಳ ಸ್ಮರಣಾರ್ಥ ಶ್ರೀಮತಿ ಸುಮಂಗಲಮ್ಮ ಎನ್.ಜಿ. ಅಮರೇಶ್ ಮತ್ತು ಮಕ್ಕಳು, ಶ್ರೀಮತಿ ಎನ್.ಪಿ. ರೇಖಾ ಎನ್.ಜಿ. ಪ್ರಕಾಶ್ ಮತ್ತು ಮಕ್ಕಳ ಭಕ್ತಿ ಸೇವೆ ನಡೆಯುವುದು.

## ನಗರದ ಲಲಿತಾ ಶಾಲೆಯಲ್ಲಿ ಇಂದು

ಲಲಿತ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಲಲಿತ ಪ್ರಿ ಯುನಿವರ್ಸಿಟಿ ಕಾಲೇಜು ಆಶ್ರಯದಲ್ಲಿ ಲಲಿತ ಉತ್ಸವ ವಾರ್ಷಿಕ ಕೂಟ ಕಾರ್ಯಕ್ರಮದಲ್ಲಿ ಇಂದು ಸಂಜೆ 5 ಗಂಟೆಗೆ ವಾರ್ಷಿಕ ಕೂಟ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ನ್ಯಾಯಮೂರ್ತಿ ಜೆ.ವಿ. ವಿಜಯಾನಂದ ಆಗಮಿಸುವರು. ಶ್ರೀಮತಿ ಶಶಿಕಲಾ ಇ.ಆರ್. ಅಧ್ಯಕ್ಷತೆ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಡಾ. ರವಿರಾಜ ಎಂ.ವಿ. ಆಗಮಿಸುವರು. ಅತಿಥಿಗಳಾಗಿ ಶ್ರೀಮತಿ ಪ್ರೀತಿ ದುಬೆ, ಮಣಿಕಾನಂದನ್ ಕೆ.ವಿ.ಎನ್. ಆಗಮಿಸುವರು.

## ನಗರದಲ್ಲಿ ಇಂದು ಚಿಂತನೆ - ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರಿಂದ ಚಿಂತನೆ ಮತ್ತು ಸಂವಾದವು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 6 ಗಂಟೆಗೆ ನಡೆಯುವುದು. ಭಾಗವಹಿಸುವವರು : ಶಿವನಕೆರೆ ಬಸವಲಿಂಗಪ್ಪ ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್ ಭಾಗವಹಿಸುವರು.


## ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಪ್ರೊ. ಬಿ. ಸಿದ್ದಲಿಂಗಯ್ಯ ವಹಿಸುವರು. ವೀರಣ್ಣ ಎಸ್. ಜತ್ತಿ ಸಮಾರೋಪ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಡಾ. ಹೆಚ್. ಮಲ್ಲಿಕಾರ್ಜುನಪ್ಪ ಆಗಮಿಸುವರು. ಡಾ. ಕೆ.ಟಿ. ನಾಗರಾಜ ನಾಯ್ಕ ಉಪಸ್ಥಿತರಿರುವರು. ಶ್ರೀ ತರಳಬಾಳು ಜಗದ್ಗುರು ಲಿಂ. ಶ್ರೀ ಗುರು ಶಾಂತರಾಜ ದೇಶೀಕೇಂದ್ರ ಮಹಾಸ್ವಾಮಿಗಳವರ ಸ್ಮರಣಾರ್ಥ 2020-22 ರಲ್ಲಿ ಹೆಚ್ಚು ಅಂಕ ಗಳಿಸಿದ ಕಾಲೇಜಿನ ವಿದ್ಯಾರ್ಥಿನಿಯರಾದ ಕು. ನೂರ್ ಈ ಸಭಾ ಎಸ್.ಕೆ., ಶ್ರೀಮತಿ ಸ್ನೇಹ ಪಿ. ನಾಯ್ಕ.

ಶ್ರೀ ತರಳಬಾಳು ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಸ್ಮರಣಾರ್ಥ ನಗದು ಬಹುಮಾನ 2020-22ರಲ್ಲಿ ಕನ್ನಡ ಮಾಧ್ಯಮದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕಾಲೇಜಿನ ವಿದ್ಯಾರ್ಥಿ ಗಣೇಶ್ ಎಸ್.ಕೆ.

## ನಗರಕ್ಕೆ ಇಂದು ಕರ್ಜಗಿ



ಜೈನ್ ಪಬ್ಲಿಕ್ ಸ್ಕೂಲ್ ವತಿಯಿಂದ 'ಜೆಪಿಎಸ್ ಸ್ಪೆಕ್ಟಕ್ಯುಲರ್' ಸಂಗೀತ ಕಾರ್ಯಕ್ರಮ ಇಂದು ಸಂಜೆ 5 ಗಂಟೆಗೆ ಜೆಪಿಎಸ್ ಕ್ಯಾಂಪಸ್‌ನಲ್ಲಿ ನಡೆಯಲಿದೆ. ಮುಖ್ಯ ಅತಿಥಿಯಾಗಿ ಗುರುರಾಜ ಕರ್ಜಗಿ ಅವರು ಆಗಮಿಸುವರು. ಗೌರವಾನ್ವಿತ ಅತಿಥಿಗಳಾಗಿ ಶ್ರೀಮತಿ ರೇಖಾ ಕುಂಬಾರ್, ಶ್ರೀಮತಿ ಪ್ರಭಾವತಿ ಸಿ. ಶೇತಸನದಿ ಆಗಮಿಸುವರು.

**ಸೇಲ್ಸ್‌ಮನ್ ಬೇಕಾಗಿದ್ದಾರೆ**
FMCG ಕಂಪನಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಆಕರ್ಷಕ ಸಂಬಳ ಹಾಗೂ ಇನ್‌ಸೆಂಟಿವ್ಸ್.
ಸಂಪರ್ಕಿಸಿ
ಪ್ರಕಾಶ್ ಎಂಟರ್‌ಪ್ರೈಸಸ್
#219/01-06, ಶ್ರೀಧಾಮ, ಎನ್.ಆರ್.ರಸ್ತೆ ಹಿಂಭಾಗ, ದಾವಣಗೆರೆ- 1.
08192 - 296620

**WANTED**
Require Supervisor for Supervision work on Construction site with Experience of 2 or 3 years.
Candidate must know to read & write Properly.
Interested can apply with proper resume & Photo Attested.
Attractive Salary / M : 98803 04009

ANVAYA
**ಅನ್ವಯ ಆಯುರ್ವೇದ ಮತ್ತು ಪಂಚಕರ್ಮ ತರಬೇತಿ ಸಂಸ್ಥೆ**
#1288, ಹಂಜಿ ನಿಲಯ, 8ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.
ಎಸ್.ಟಿ.ಇ.ಡಿ-ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಪ್ರಮಾಣಿಕೃತಗೊಂಡಿದೆ
2024-25ರ ಶೈಕ್ಷಣಿಕ ವರ್ಷದ ಪ್ರವೇಶಾತಿ ಪ್ರಾರಂಭ
ಕೋರ್ಸ್‌ಗಳ ವಿವರ :
✦ ಪಂಚಕರ್ಮ ಮತ್ತು ಮಸಾಜ್ ಥೆರಪಿಯಲ್ಲಿ ಡಿಪ್ಲೋಮಾ.
✦ ಆಯುರ್ವೇದ, ಪಂಚಕರ್ಮ ಮತ್ತು ನರ್ಸಿಂಗ್‌ನಲ್ಲಿ ವೃತ್ತಿಪರ ಡಿಪ್ಲೋಮಾ.
✦ ಆಯುರ್ವೇದ ಫಾರ್ಮಸಿಯಲ್ಲಿ ಸುಧಾರಿತ ಡಿಪ್ಲೋಮಾ.
✦ ಆಯುರ್ವೇದ ಸಾಮಾನ್ಯ ಔಷಧಿಯಲ್ಲಿ ಸ್ನಾತಕೋತ್ತರ ಡಿಪ್ಲೋಮಾ.
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿ.ಯು.ಸಿ., ಬಿ.ಎ.ಎಮ್.ಎಸ್.
ಅವಧಿ : 6 ತಿಂಗಳು / 1 ವರ್ಷ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
☎ : 08192-452312, 63643 21664

**ಜನ್ಮದಿನದ ಶುಭಾಶಯಗಳು**
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರೂ, ಎಪಿಎಂಸಿ ಮಾಜಿ ಅಧ್ಯಕ್ಷರೂ, ನನ್ನ ಆತ್ಮೀಯರೂ ಆದ
ಶ್ರೀ ಮುದೇಗೌಡ್ರ ಗಿರೀಶ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಕಣ್ಣಾಳ ಅಂಜಿನಪ್ಪ, ಜಿಲ್ಲಾ ಕಾಂಗ್ರೆಸ್ ಮುಖಂಡರು
ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ವ ಜನಾಂಗದ ಏಕತಾ ರಕ್ಷಣಾ ಸಮಿತಿ (ರಿ.)
ಸಂಸ್ಥಾಪಕ ಅಧ್ಯಕ್ಷರು, ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗ (ರಿ.)
ರಾಜ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ದಲಿತ ಮಹಾಸಭಾ.

## ಕೇಂದ್ರ : 'ಭಾರತ್' ಬ್ರ್ಯಾಂಡ್ ಅಕ್ಕಿ ಮಾರಾಟ

ನವದೆಹಲಿ, ಡಿ. 27 – ಅಕ್ಕಿ ಬೆಲೆ ನಿಯಂತ್ರಿಸುವ ಸಲುವಾಗಿ ಎಫ್.ಸಿ.ಐ.ನ ಅಕ್ಕಿಯನ್ನು 'ಭಾರತ್' ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆದರೆ, ಅಕ್ಕಿಯ ವಿನಾಯಿತಿ ಪ್ರಮಾಣದ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಕೇಂದ್ರ ಆಹಾರ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬೆಲೆ ನಿಯಂತ್ರಣದ ಸಲುವಾಗಿ ಎಫ್.ಸಿ.ಐ. ಅಕ್ಕಿಯನ್ನು ಇ-ಹರಾಜು ಮೂಲಕ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಕೇಂದ್ರ ಸರ್ಕಾರ ನಡೆಸಿದ ಪ್ರಯತ್ನಕ್ಕೆ ಉತ್ತಮ ಸ್ಪಂದನೆ ಸಿಕ್ಕಿರಲಿಲ್ಲ. ಈ ಹಿನ್ನೆಲೆಯಲ್ಲಿ ಭಾರತ್ ಬ್ರ್ಯಾಂಡ್ ಮೂಲಕ ಅಕ್ಕಿ ಮಾರಲು ಸರ್ಕಾರ ನಿರ್ಧರಿಸಿದೆ.

## ನಗರದಲ್ಲಿ ನಾಳೆ ವಿಶ್ವ ಮಾನವ ದಿನಾಚರಣೆ

ದಾವಣಗೆರೆ, ಡಿ. 27 - ಜಿಲ್ಲಾಡಳಿತದ ವತಿಯಿಂದ ನಾಡಿದ್ದು ದಿನಾಂಕ 29 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಾಭದ್ರಾ ಸಭಾಂಗಣದಲ್ಲಿ ಶ್ರೀ ವಿಶ್ವಮಾನವ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.


COMMERCIAL SPACE FOR RENT



BUILDING SUITABLE FOR OFFICE/CLINIC in Ground Floor
Size 45x55
3 Rooms+1 Hall (4AC)+ 1 Hall Non AC+Kitchen+ Corporation Water
7th Cross, 9th Main, P.J.Extension, Near Mruthunjaya Hospital, Davanagere.
Contact: 98804 66799, 99860 35969.


## ಅಯೋಧ್ಯೆ ರೈಲ್ವೆ ನಿಲ್ದಾಣಕ್ಕೆ 'ಅಯೋಧ್ಯೆ ಧಾಮ್' ಹೆಸರು

ಅಯೋಧ್ಯೆ, ಡಿ. 27 – ಅಯೋಧ್ಯೆಯ ಜಂಕ್ಷನ್ ರೈಲ್ವೆ ನಿಲ್ದಾಣದ ಹೆಸರನ್ನು ಅಯೋಧ್ಯ ಧಾಮ್ ಜಂಕ್ಷನ್ ಎಂದು ಬದಲಿಸಲಾಗಿದೆ ಎಂದು ಅಯೋಧ್ಯೆಯ ಸಂಸದ ಲಲ್ಲು ಸಿಂಗ್ ತಿಳಿಸಿದ್ದಾರೆ. ರೈಲ್ವೆ ನಿಲ್ದಾಣವನ್ನು ಮರು ನಿರ್ಮಿಸಲಾಗಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಡಿಸೆಂಬರ್ 30ರಂದು ಉದ್ಘಾಟಿಸಲಿದ್ದಾರೆ.

॥ ಶ್ರೀ ಗುರು ಸಿದ್ಧರಾಮೇಶ್ವರ ಪ್ರಸನ್ನ ॥

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 27.12.2023ನೇ ಬುಧವಾರ ಮಧ್ಯಾಹ್ನ 3.30ಗಂಟೆಗೆ

**ಶ್ರೀಮತಿ ಕುಮುದಿನಿ ಜಿ. ಅಜ್ಜಂಪುರಶೆಟ್ರು**

(ಲಿಂ. ಶ್ರೀಮತಿ ವಿಶಾಲಕ್ಷಮ್ಮ ಲಿಂ. ಶ್ರೀ ಗುರುಬಸಪ್ಪ ಸಿದ್ಧಮಲ್ಲಪ್ಪ ಶೆಟ್ರು ಇವರ ಸುಪುತ್ರಿ ಮತ್ತು ದಿ. ಅಜ್ಜಂಪುರಶೆಟ್ರು ಪ್ರಮೋದ್ ಮತ್ತು ಶ್ರೀ ಅಜ್ಜಂಪುರಶೆಟ್ರು ಮೃತ್ಯುಂಜಯ ಅವರ ಸಹೋದರಿ) ಇವರು ಲಿಂಗೈಕ್ಯರಾಗಿದ್ದು ಇವರ ಅಂತ್ಯಸಂಸ್ಕಾರವನ್ನು ದಿನಾಂಕ 28.12.2023ನೇ ಗುರುವಾರ ಬೆಳಿಗ್ಗೆ 11 ಕ್ಕೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಮೃತರ ದರ್ಶನ : ಬೆಳಿಗ್ಗೆ 7 ರಿಂದ 10.30ರವರೆಗೆ
ಮೃತರ ಸ್ವಗೃಹ, ಪ್ರಣವ, 4ನೇ ಮುಖ್ಯರಸ್ತೆ, 4ನೇ ಕ್ರಾಸ್, ಎಸ್.ಎಸ್. ಬಡಾವಣೆ ಬಿ ಬ್ಲಾಕ್, ದಾವಣಗೆರೆ.

ದುಃಖತಪ್ತರು : ಶ್ರೀಮತಿ ಗೀತಾ ಎಲ್.ಎಸ್., ಶ್ರೀಮತಿ ಶ್ರೀ ಮೃತ್ಯುಂಜಯ ಜಿ. ಅಜ್ಜಂಪುರಶೆಟ್ರು ಶ್ರೀಮತಿ ಭಾರತಿ ಕೌಜಲಗಿ, ಅಜ್ಜಂಪುರಶೆಟ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.

॥ ಶ್ರೀ ಉತ್ಸವಾಂಬಾದೇವಿ ಪ್ರಸನ್ನ ॥

### ಕೈಲಾಸ ಸಮಾರಾಧನೆ



**ದಿ॥ ಶ್ರೀಮತಿ ಹೊನ್ನಮ್ಮನವರು** (ತರಕಾರಿ ವ್ಯಾಪಾರಿ)

ದಾವಣಗೆರೆ ಸಿಟಿ ಹೊಂಡದ ಸರ್ಕಲ್ ವಾಸಿಗಳಾದ
ಶ್ರೀ ಎಸ್.ಎನ್. ಚಂದ್ರಪ್ಪ, ಶ್ರೀ ಎಸ್.ಎನ್. ತಿಪ್ಪೇಸ್ವಾಮಿ, ಶ್ರೀ ಎಸ್.ಎನ್. ಗಣೇಶ್
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 16-12-2023 ರ ಶನಿವಾರ ಮಧ್ಯಾಹ್ನ 12 ಕ್ಕೆ ನಮ್ಮ ಪೂಜ್ಯ ತಾಯಿಯವರಾದ
ದಿ॥ ಶ್ರೀ ನಾಗಪ್ಪನವರ ಧರ್ಮಪತ್ನಿ
**ಶ್ರೀಮತಿ ಹೊನ್ನಮ್ಮನವರು** (ತರಕಾರಿ ವ್ಯಾಪಾರಿ)
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು
ದಿನಾಂಕ 28-12-2023ನೇ ಗುರುವಾರ ಬೆಳಿಗ್ಗೆ 11.30 ಕ್ಕೆ
ಮೃತರ ಸ್ವಗೃಹ, ಹೊಂಡದ ಸರ್ಕಲ್ ಹತ್ತಿರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ
ಪುತ್ರರು : ಎಸ್.ಎನ್. ಚಂದ್ರಪ್ಪ, ಮಾಜಿ ಉಪಾಧ್ಯಕ್ಷರು, ನಗರಸಭೆ, ದಾವಣಗೆರೆ.
ಎಸ್.ಎನ್. ತಿಪ್ಪೇಸ್ವಾಮಿ (SNT) ತರಕಾರಿ ವರ್ತಕರು
ಎಸ್.ಎನ್. ಗಣೇಶ್,
ಪುತ್ರಿಯರು : ಚಂದ್ರಮ್ಮ, ಪದ್ಮಾವತಿ, ವಿಜಯಲಕ್ಷ್ಮಿ, ತುಳಸಮ್ಮ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು.
ಮೊ. : 9448924110, 9591425033, 7259384712

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




ಶುಭ ಕೋರುವವರು : ಮುದೇಗೌಡ್ರು ಗಿರೀಶ್ ಅಭಿಮಾನಿ ಬಳಗ, ಶಿರಮಗೊಂಡನಹಳ್ಳಿ
SS, SSG, SSM ಅಭಿಮಾನಿ ಬಳಗ, ದಾವಣಗೆರೆ.
ಕೆ.ಜೆ. ರಾಘವೇಂದ್ರ, ಶಿರಮಗೊಂಡನಹಳ್ಳಿ.

## ಷೇರು : ದಾಖಲೆ ಮಟ್ಟಕ್ಕೆ ಜಿಗಿತ

ಮುಂಬೈ, ಡಿ. 27 – ಸೆನ್ಸೆಕ್ಸ್ ಹಾಗೂ ನಿಫ್ಟಿ ಸೂಚ್ಯಂಕಗಳು ಬುಧವಾರ ದಾಖಲೆ ಮಟ್ಟಕ್ಕೆ ತಲುಪಿವೆ. ಮುಂಬೈ ಷೇರು ಸೂಚ್ಯಂಕವು 72,000ರ ಗಡಿ ದಾಟಿದೆ.

50 ಷೇರುಗಳ ನಿಫ್ಟಿ ಸೂಚ್ಯಂಕವು 21,654.75ರ ಹಂತಕ್ಕೆ ತಲುಪಿದೆ. ಲೋಹ, ಕಮಾಡಿಟಿ, ವಾಹನ ಹಾಗೂ ಬ್ಯಾಂಕಿಂಗ್ ವಲಯದ ಷೇರುಗಳಲ್ಲಿ ಏರಿಕೆ ಕಂಡು ಬಂದಿದೆ.

ಮುಂಬೈ ಷೇರು ಸೂಚ್ಯಂಕದಲ್ಲಿ 701.63 ಅಂಕಗಳ ಏರಿಕೆಯಾಗಿ, 72,038.43ರ ಹಂತಕ್ಕೆ ತಲುಪಿದೆ. ಒಟ್ಟು ಏರಿಕೆ ಶೇ.1.09 ಆಗಿದೆ.


केनरा बैंक Canara Bank
VIDYANAGARA Branch, DAVANGERE.
GOLD LOAN PLAZA
Seperate Section of Gold Loans
fulfill your needs with Gold Loans
Timings : 10 am to 2 pm / 2.30 to 5.00 pm
by-Officers/Appraiser Available above timings
Mob. : 83099 94868



COMMERCIAL BUILDING FOR RENT




ದಾವಣಗೆರೆ ನಗರದ ಹೃದಯ ಭಾಗವಾದ ವಿದ್ಯಾನಗರದ 60 ಅಡಿ ಮುಖ್ಯರಸ್ತೆಯಲ್ಲಿರುವ ಈಶ್ವರ ಪಾರ್ವತಿ ಕಲ್ಯಾಣ ಮಂಟಪದ ಪಕ್ಕ, ಮಾಗನೂರು ಬಸಪ್ಪ ಕಾಲೇಜ್ ಎದುರಿನಲ್ಲಿರುವ ಪೂರ್ವ ದಿಕ್ಕಿನ ಸಂಪೂರ್ಣ ವಾಸ್ತು ಹೊಂದಿರುವ 'ಶಿವ ಪಾರ್ವತಿ' ಕಮರ್ಷಿಯಲ್ ಕಾಂಪ್ಲೆಕ್ಸ್ ಬಾಡಿಗೆಗೆ ಇದೆ.

Lower Ground 10'x13' ಅಳತೆಯ 3 ಮಳಿಗೆಗಳು
Upper Ground 10'x13' ಅಳತೆಯ 3 ಮಳಿಗೆಗಳು
First Floor 1200 ಅಡಿ ಓಪನ್ ಹಾಲ್
Terrace 1600 ಅಡಿ ಓಪನ್ ಹಾಲ್ (Top Closed)

ಬ್ರಾಂಡೆಡ್ ಕಂಪನಿಗಳಿಗೆ ಮೊದಲ ಆದ್ಯತೆ
ಬ್ಯಾಂಕ್, ಸೊಸೈಟಿ, ಕಾರ್ಪೊರೇಟ್ ಆಫೀಸ್‌ಗಳಿಗೆ ಸೂಕ್ತವಾಗಿರುತ್ತದೆ.
ಟ್ಯೂಷನ್ ಕ್ಲಾಸಸ್, ಡ್ಯಾನ್ಸ್ ಕ್ಲಾಸಸ್, ಸಂಗೀತ ಕ್ಲಾಸ್, ಜಿಮ್ ನಡೆಸಲು ಅನುಕೂಲವಾದಂತಹ ಸ್ಥಳ

ಸಂಪರ್ಕಿಸಿ : ಅನುಗ್ರಹ ಶ್ರೀನಿವಾಸ್
Mobile : 95900 95900
Whatsapp : 98440 89440





## ನಲ್ಕುಂದ ಗ್ರಾಮದ ಸಚಿನ್ ನಿಧನ




ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ ವಾಸಿ ನಾಡಿಗೇರ ಗುರುಸಿದ್ದಪ್ಪನವರ ಪುತ್ರ ನಾಗರಾಜ ಇವರ ಮಗನಾದ

**ಸಚಿನ್.ಎನ್**

ಇವರು ದಿನಾಂಕ 27.12.2023ರ ಬುಧವಾರ ಬೆಳಿಗ್ಗೆ 10.35ಕ್ಕೆ ನಿಧನರಾದರೆಂದು ತಿಳಿಸಲು. ವಿಷಾದಿಸುತ್ತೇವೆ.

ಮೃತರಿಗೆ 33 ವರ್ಷ ವಯಸ್ಸಾಗಿತ್ತು. ಮೃತರ ಪತ್ನಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.12.2023ರ ಗುರುವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಪತ್ನಿ: ಶಂಕರಮ್ಮ
ನಾಗರಾಜಪ್ಪ ಹಾಗೂ ಕುಟುಂಬವರ್ಗ, ನಲ್ಕುಂದ
ಮೊ : 91416 77925, 97399 94214



ಶಿವ



ಓಂ ಸಾಯಿ ಶ್ರೀ ಬಸವಜನ ಕಲ್ಯಾಣ ಟ್ರಸ್ಟ್ (ರಿ.)
ಅಮರಾವತಿ ಕಾಲೋನಿ, ಇ ಬ್ಲಾಕ್ ಪ್ರಧಾನ್ ರೆಸಿಡೆನ್ಸಿ, ಹರಿಹರ-577601.

### ಶ್ರೀ ಸಾಯಿ ಮಂದಿರದಲ್ಲಿ ಕಾರ್ತಿಕ ದೀಪೋತ್ಸವ

ದಿನಾಂಕ : 28.12.2023ನೇ ಶುಭ ಗುರುವಾರ, ಸಂಜೆ : 7 ಗಂಟೆಗೆ

**ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ**

ಈರಯ್ಯ ಶಾಸ್ತ್ರಿ ಹಿರೇಮಠ, ಹಾಗೂ ಸುಕುಮುನಿ ಸ್ವಾಮಿಗಳ ಸಾಂಗತ್ಯದಲ್ಲಿ ಪೂಜಾ ಕಾರ್ಯಗಳು ನೆರವೇರಲಿವೆ.

ಬಸವ ಬಳಗ, ಅಕ್ಕನ ಬಳಗ, ಮಲೇಬೆನ್ನೂರು. ಗುರುಭಕ್ತಿ ಸಂಗಮ ಸೇವಾ ಬಳಗ, ಹರಿಹರ, ಶ್ರೀ ಶಕ್ತಿ ಮತ್ತು ಧರ್ಮಸ್ಥಳ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರು.

ಅಮರಾವತಿ ಕಾಲೋನಿ, ಕೆ.ಹೆಚ್.ಬಿ. ಕಾಲೋನಿ, ಅಮರಾವತಿ, ದೊಗ್ಗಳ್ಳಿ ಮತ್ತು ಸುತ್ತ-ಮುತ್ತಲಿನ ಗ್ರಾಮಸ್ಥರು.



ಸ್ವಾಗತ ಕೋರುವವರು :
ಅಧ್ಯಕ್ಷರು ಮತ್ತು ಸದಸ್ಯರು
ಓಂ ಸಾಯಿ ಶ್ರೀ ಬಸವ ಜನ ಕಲ್ಯಾಣ ಟ್ರಸ್ಟ್ (ರಿ.) ಹರಿಹರ.

**ಅಮರಾವತಿ ಪರಮೇಶ್ವರಪ್ಪ**
ಮಾಜಿ ಪ್ರಧಾನರು ಹಾಗೂ ಓಂ ಸಾಯಿ ಶ್ರೀ ಬಸವ ಜನ ಕಲ್ಯಾಣ ಟ್ರಸ್ಟ್ ಅಧ್ಯಕ್ಷರು, ಅಮರಾವತಿ ಕಾಲೋನಿ ಹರಿಹರ.